# NEWS CLIPPINGS

## 16-12-2025 TO 31-12-2025

Vijayakarnataka 16-12-2025

# 20ರಂದು ಭೂತಾರಾಧನೆ- ಮಾಯದ ನಡೆ ಜೋಗದ ನುಡಿ ಲೋಕಾರ್ಪಣೆ

**ವಿಕ ಸುದ್ದಿಲೋಕ** ಕೊಣಾಜೆ

ಕ್ರಿಯೆಟಿವ್ ಪುಸ್ತಕ ಮನೆ ಕಾರ್ಕಳ ಮತ್ತು ಸಂತ ಆಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ಕ್ರಿಯೆಟಿವ್ ಪುಸ್ತಕ ಮನೆ ಪ್ರಕಾಶನದ ವಿಶೇಷ ಪ್ರಕಟಣೆ, ಜಾನಪದ ವಿದ್ವಾಂಸ ಡಾ.ಕೆ. ಚಿನ್ನಪ್ಪ ಗೌಡ ಅವರ ಸಂಶೋಧನಾ ಕೃತಿ ಭೂತಾರಾಧನೆ- ಮಾಯದ ನಡೆ ಜೋಗದ ನುಡಿ ಲೋಕಾರ್ಪಣೆ ಕಾರ್ಯಕ್ರಮ ಮಂಗಳೂರು ಸಂತ ಆಲೋಶಿಯಸ್ ಪರಿಗಣಿತ ವಿವಿಯ ಎಲ್.ಎಫ್.ರಸ್ಕಿನ್ಹ ಸಭಾಂಗಣದಲ್ಲಿ ಡಿ.20ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ವಿಶ್ರಾಂತ ಕುಲಪತಿಗಳು, ಜಾನಪದ ವಿದ್ವಾಂಸರಾದ ಪ್ರೊ.ಬಿ.ಎ.ವಿವೇಕ್ ರೈ ಅವರು ಕೃತಿ ಲೋಕಾರ್ಪಣೆಗೊಳಿಸಲಿದ್ದು ಸಾಹಿತಿ ಡಾ.ರಾಜಶೇಖರ್ ಹಳೆಮನೆ ಕೃತಿಯ ಕುರಿತು ಅವಲೋಕನ ಮಾಡಲಿದ್ದಾರೆ. ಆಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್.ಜೆ., ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಪ್ಪ ಗೌಡ, ಲೇಖಕ, ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಭಾಗವಹಿಸಲಿದ್ದಾರೆ. ಕಾರ್ಕಳ ಕ್ರಿಯೆಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕರಾದ ಅಶ್ವತ್ಥ್ ಎಸ್.ಎಲ್. ಅಧ್ಯಕ್ಷತೆ ವಹಿಸಲಿದ್ದಾರೆ. ದೈವನರ್ತಕರಾದ ಶೇಖರ ಪರವ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

**ಡಾ.ಕೆ.ಚಿನ್ನಪ್ಪ ಗೌಡರ ಸಂಶೋಧನಾ ಕೃತಿ:** ವಿಶ್ರಾಂತ ಕುಲಪತಿ, ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಅವರ ಭೂತಾರಾಧನೆ- ಜಾನಪದೀಯ ಅಧ್ಯಯನ ಗ್ರಂಥವು 35 ವರ್ಷಗಳ ಹಿಂದೆ ಪ್ರಕಟವಾಗಿದ್ದು, ಈ ಗ್ರಂಥದ ವಿಸ್ತೃತ ಆವೃತ್ತಿಯೇ ಭೂತಾರಾಧನೆ – ಮಾಯದ ನಡೆ ಜೋಗದ ನುಡಿ ಸಂಪುಟ. ನೂತನ ಆವೃತ್ತಿಯಲ್ಲಿ ಹನ್ನೆರಡು ಅಧ್ಯಾಯಗಳಿವೆ. ಭೂತಾರಾಧನೆಯ ಪರಿವರ್ತನೆಯ ನೆಲೆಗಳು, ಸಾಮಾಜಿಕ ಧ್ವನಿಗಳು, ಸಾಂಸ್ಕೃತಿಕ ಅನನ್ಯತೆ, ಭೂತಾರಾಧನೆಯ ಅಧ್ಯ ಯನ ವಿಸ್ತಾರಗೊಂಡ ಸೂಕ್ಷ್ಮತೆಯ ಆಯಾಮಗಳು, ಪಾಡ್ದನ ಪಠ್ಯಗಳು ಆರಾಧನೆಯ ರಂಗಪಠ್ಯಗಳಾಗುವ ಪ್ರಕ್ರಿಯೆ ಇವುಗಳಿಗೆ ಸಂಬಂಧಿಸಿದ ಹೊಸ ಅಧ್ಯಾಯಗಳು ಈ ವಿಸ್ತೃತ ಆವೃತ್ತಿಯಲ್ಲಿವೆ.

*Kannadaprabha 16-12-2025*

# ಡಾ.ಕೆ.ಚಿನ್ನಪ್ಪ ಗೌಡರ ಸಂಶೋಧನಾ ಕೃತಿ ಬಿಡುಗಡೆ 20ರಂದು

• **ಕನ್ನಡಪ್ರಭ ವಾರ್ತೆ** ಉಳ್ಳಾಲ

ಕ್ರಿಯೆಟಿವ್ ಪುಸ್ತಕ ಮನೆ ಪ್ರಕಾಶನದ ವಿಶೇಷ ಪ್ರಕಟಣೆ ಜಾನಪದ ವಿದ್ವಾಂಸ ಡಾ.ಕೆ.ಚಿನ್ನಪ್ಪ ಗೌಡ ಅವರ ಸಂಶೋಧನಾ ಕೃತಿ 'ಭೂತಾರಾಧನೆ- ಮಾಯದ ನಡೆ ಜೋಗದ ನುಡಿ' ಲೋಕಾರ್ಪಣೆ ಕಾರ್ಯಕ್ರಮವು ಮಂಗಳೂರು ಸಂತ ಅಲೋಶಿಯಸ್ ಪರಿಗಣಿತ ವಿವಿಯ ಎಲ್ ಎಫ್ ರಸ್ಕಿನ್ಹ ಸಭಾಂಗಣದಲ್ಲಿ 20ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ. ಕ್ರಿಯೆಟಿವ್ ಪುಸ್ತಕ ಮನೆ ಕಾರ್ಕಳ ಮತ್ತು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ಪುಸ್ತಕ ಪ್ರಕಟವಾಗಿದೆ.

ವಿಶ್ರಾಂತ ಕುಲಪತಿ, ಜಾನಪದ ವಿದ್ವಾಂಸ ಪ್ರೊ.ಬಿ.ಎ.ವಿವೇಕ್ ರೈ ಕೃತಿ ಲೋಕಾರ್ಪಣೆಗೊಳಿಸಲಿದ್ದು, ಸಾಹಿತಿ ಡಾ.ರಾಜಶೇಖರ್‌ಹಳೆಮನೆ ಕೃತಿಯ ಕುರಿತು ಅವಲೋಕನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್ ಜೆ , ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ.ನಾಗಪ್ಪ ಗೌಡ, ಲೇಖಕರು, ಜಾನಪದ ವಿದ್ವಾಂಸರಾದ ಡಾ. ಕೆ.ಚಿನ್ನಪ್ಪ ಗೌಡ ಭಾಗವಹಿಸಲಿದ್ದಾರೆ.

ಕಾರ್ಕಳ ಕ್ರಿಯೆಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವಥ್ ಎಸ್ ಎಲ್ ಅಧ್ಯಕ್ಷತೆ ವಹಿಸಲಿದ್ದಾರೆ. ದೈವನರ್ತಕ ಶೇಖರ ಪರವ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

*Vijayavani 16-12-2025*

# 20ರಂದು ಡಾ.ಕೆ.ಚಿನ್ನಪ್ಪ ಗೌಡರ ಕೃತಿ ಬಿಡುಗಡೆ

**ಮಂಗಳೂರು:** ಕ್ರಿಯೇಟಿವ್ ಪುಸ್ತಕ ಮನೆ ಕಾರ್ಕಳ ಮತ್ತು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ಕ್ರಿಯೇಟಿವ್ ಪುಸ್ತಕ ಮನೆ ಪ್ರಕಾಶನದ ವಿಶೇಷ ಪ್ರಕಟಣೆ, ಜಾನಪದ ವಿದ್ವಾಂಸ ಡಾ.ಕೆ.ಚಿನ್ನಪ್ಪ ಗೌಡ ಅವರ ಸಂಶೋಧನಾ ಕೃತಿ ಭೂತಾರಾಧನೆ-ಮಾಯದ ನಡೆ ಜೋಗದ ನುಡಿ ಲೋಕಾರ್ಪಣೆ ಕಾರ್ಯಕ್ರಮ ಮಂಗಳೂರು ಸಂತ ಅಲೋಶಿಯಸ್ ಪರಿಗಣಿತ ವಿವಿಯ ಎಲ್.ಎಫ್ ರಸ್ಕಿನ್ಹ ಸಭಾಂಗಣದಲ್ಲಿ ಡಿ.20ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ವಿಶ್ರಾಂತ ಕುಲಪತಿ, ಜಾನಪದ ವಿದ್ವಾಂಸ ಪ್ರೊ.ಬಿ.ಎ.ವಿವೇಕ್ ರೈ ಕೃತಿ ಲೋಕಾರ್ಪಣೆಗೊಳಿಸಲಿದ್ದು, ಸಾಹಿತಿ ಡಾ.ರಾಜಶೇಖರ್ ಹಳೆಮನೆ ಕೃತಿಯ ಕುರಿತು ಅವಲೋಕನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್ ಜೆ , ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ನಾಗಪ್ಪ ಗೌಡ, ಲೇಖಕರು, ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಭಾಗವಹಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಕಳ ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವಥ್ ಎಸ್.ಎಲ್. ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ದೈವನರ್ತಕರಾದ ಶೇಖರ ಪರವ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭೂತಾರಾಧನೆ-ಜಾನಪದೀಯ ಅಧ್ಯಯನ ಗ್ರಂಥ 35 ವರ್ಷಗಳ ಹಿಂದೆ ಪ್ರಕಟವಾಗಿದ್ದು, ಈ ಗ್ರಂಥದ ವಿಸ್ತೃತ ಆವೃತ್ತಿಯೇ ಭೂತಾರಾಧನೆ-ಮಾಯದ ನಡೆ ಜೋಗದ ನುಡಿ ಸಂಪುಟ. ಭೂತಾರಾಧನೆಯ ಪರಿವರ್ತನೆಯ ನೆಲೆಗಳು, ಸಾಮಾಜಿಕ ಧ್ವನಿಗಳು, ಸಾಂಸ್ಕೃತಿಕ ಅನನ್ಯತೆ, ಭೂತಾರಾಧನೆಯ ಅಧ್ಯಯನ ವಿಸ್ತಾರಗೊಂಡ ಸೂಕ್ಷ್ಮತೆಯ ಆಯಾಮಗಳು, ಪಾಡ್ದನ ಪಠ್ಯಗಳು ಆರಾಧನೆಯ ರಂಗಪಠ್ಯಗಳಾಗುವ ಪ್ರಕ್ರಿಯೆ ಇವುಗಳಿಗೆ ಸಂಬಂಧಿಸಿದ ಹೊಸ ಅಧ್ಯಾಯಗಳು ಈ ವಿಸ್ತೃತ ಆವೃತ್ತಿಯಲ್ಲಿವೆ. ಕಪ್ಪು ಬಿಳುಪು ಮತ್ತು ವರ್ಣಚಿತ್ರಗಳು, ರೇಖಾಚಿತ್ರಗಳು, ತಖ್ತೆಗಳು, ನಕ್ಷೆಗಳು ಹಾಗೂ ಐದು ದಶಕಗಳ ಹಿಂದಿನ ಭೂತಾರಾಧನೆಯ ಅಧಿಕೃತ ಮಾಹಿತಿಗಳು ಈ ಆವೃತ್ತಿಯ ಸಾಂಸ್ಕೃತಿಕ ಮಹತ್ವ ಹೆಚ್ಚಿಸಿವೆ.

*Hosadigantha 16-12-2025*

# ಡಿ.20: ಡಾ.ಕೆ. ಚಿನ್ನಪ್ಪ ಗೌಡರ 'ಭೂತಾರಾಧನೆ' ಮಾಯದ ನಡೆ ಜೋಗದ ನುಡಿ' ಲೋಕಾರ್ಪಣೆ

• **ಮಂಗಳೂರು:** ಕ್ರಿಯೆಟಿವ್ ಪುಸ್ತಕ ಮನೆ ಕಾರ್ಕಳ ಮತ್ತು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ಕ್ರಿಯೆಟಿವ್ ಪುಸ್ತಕ ಮನೆ ಪ್ರಕಾಶನದ ವಿಶೇಷ ಪ್ರಕಟನೆ, ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಅವರ ಸಂಶೋಧನಾ ಕೃತಿ 'ಭೂತಾರಾಧನೆ- ಮಾಯದ ನಡೆ ಜೋಗದ ನುಡಿ' ಲೋಕಾರ್ಪಣೆ ಕಾರ್ಯಕ್ರಮವು ಮಂಗಳೂರು ಸಂತ ಅಲೋಶಿಯಸ್ ಪರಿಗಣಿತ ವಿವಿಯ ಎಲ್‌ಎಫ್ ರಸ್ಕಿನ್ಹ ಸಭಾಂಗಣದಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ವಿಶ್ರಾಂತ ಕುಲಪತಿಗಳು, ಜಾನಪದ ವಿದ್ವಾಂಸರಾದ ಪ್ರೊ.ಬಿ.ಎ.ವಿವೇಕ್ ರೈ ಕೃತಿ ಲೋಕಾರ್ಪಣೆಗೊಳಿಸಲಿದ್ದು, ಸಾಹಿತಿ ಡಾ.ರಾಜಶೇಖರ್ ಹಳೆಮನೆ ಕೃತಿಯ ಕುರಿತು ಅವಲೋಕನ ಮಾಡಲಿದ್ದಾರೆ. ಅಲೋಶಿಯಸ್ ಪರಿಗಣಿತ ವಿವಿಯ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಎಸ್‌ಜೆ , ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ.ನಾಗಪ್ಪ ಗೌಡ, ಲೇಖಕರು, ಜಾನಪದ ವಿದ್ವಾಂಸರಾದ ಡಾ.ಕೆ.ಚಿನ್ನಪ್ಪ ಗೌಡ ಅವರು ಭಾಗವಹಿಸಲಿದ್ದಾರೆ. ಅಧ್ಯಕ್ಷತೆಯನ್ನು ಕಾರ್ಕಳ ಕ್ರಿಯೆಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕರಾದ ಅಶ್ವಥ್ ಎಸ್.ಎಲ್. ಅವರು ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ದೈವನರ್ತಕರಾದ ಶೇಖರ ಪರವ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

**ಡಾ.ಕೆ.ಚಿನ್ನಪ್ಪ ಗೌಡರ ಸಂಶೋಧನಾ ಕೃತಿ**

ಡಾ.ಕೆ.ಚಿನ್ನಪ್ಪ ಗೌಡರ 'ಭೂತಾರಾಧನೆ- ಜಾನಪದೀಯ ಅಧ್ಯಯನ' ಗ್ರಂಥವು 35 ವರ್ಷಗಳ ಹಿಂದೆ ಪ್ರಕಟವಾಗಿದ್ದು, ಈ ಗ್ರಂಥದ ವಿಸ್ತೃತ ಆವೃತ್ತಿಯೇ 'ಭೂತಾರಾಧನೆ – ಮಾಯದ ನಡೆ ಜೋಗದ ನುಡಿ' ಸಂಪುಟ. ಭೂತಾರಾಧನೆಯ ಪರಿವರ್ತನೆಯ ನೆಲೆಗಳು, ಸಾಮಾಜಿಕ ಧ್ವನಿಗಳು, ಸಾಂಸ್ಕೃತಿಕ ಅನನ್ಯತೆ, ಭೂತಾರಾಧನೆಯ ಅಧ್ಯಯನ ವಿಸ್ತಾರಗೊಂಡ ಸೂಕ್ಷ್ಮತೆಯ ಆಯಾಮಗಳು, ಪಾಡ್ದನ ಪಠ್ಯಗಳು ಆರಾಧನೆಯ ರಂಗಪಠ್ಯಗಳಾಗುವ ಪ್ರಕ್ರಿಯೆ ಇವುಗಳಿಗೆ ಸಂಬಂಧಿಸಿದ ಹೊಸ ಅಧ್ಯಾಯಗಳು ಈ ವಿಸ್ತೃತ ಆವೃತ್ತಿಯಲ್ಲಿವೆ. ಚಿತ್ರಗಳು, ರೇಖಾಚಿತ್ರಗಳು, ತಖ್ತೆಗಳು ಹಾಗೂ ಐದು ದಶಕಗಳ ಹಿಂದಿನ ಭೂತಾರಾಧನೆಯ ಅಧಿಕೃತ ಮಾಹಿತಿಗಳು ಈ ಆವೃತ್ತಿಯ ಸಾಂಸ್ಕೃತಿಕ ಮಹತ್ವವನ್ನು ಹೆಚ್ಚಿಸಿವೆ.

*Udayavani 16-12-2025*

# ಡಿ.20: 'ಭೂತಾರಾಧನೆ- ಮಾಯದ ನಡೆ ಜೋಗದ ನುಡಿ' ಕೃತಿ ಲೋಕಾರ್ಪಣೆ

**ಮಹಾನಗರ, ಡಿ.15:** ಕ್ರಿಯೆಟಿವ್ ಪುಸ್ತಕ ಮನೆ ಕಾರ್ಕಳ ಮತ್ತು ಸಂತ ಅಲೋಶಿಯಸ್ ವಿವಿ ಕನ್ನಡ ವಿಭಾಗದ ಸಹಯೋಗದಲ್ಲಿ ಕ್ರಿಯೆಟಿವ್ ಪುಸ್ತಕ ಮನೆ ಪ್ರಕಾಶನದ ವಿಶೇಷ ಪ್ರಕಟನೆ, ಜಾನಪದ ವಿದ್ವಾಂಸ ಡಾ|ಕೆ. ಚಿನ್ನಪ್ಪ ಗೌಡ ಅವರ ಸಂಶೋಧನಾ ಕೃತಿ 'ಭೂತಾರಾಧನೆ- ಮಾಯದ ನಡೆ ಜೋಗದ ನುಡಿ' ಬಿಡುಗಡೆ ಕಾರ್ಯಕ್ರಮವು ಮಂಗಳೂರು ಸಂತ ಅಲೋಶಿಯಸ್ ವಿವಿಯ ಎಲ್ ಎಫ್ ರಸ್ಕಿನ್ಹ ಸಭಾಂಗಣದಲ್ಲಿ ಡಿ.20ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ವಿಶ್ರಾಂತ ಕುಲಪತಿಗಳು, ಜಾನಪದ ವಿದ್ವಾಂಸ ಪ್ರೊ|ಬಿ.ಎ.ವಿವೇಕ್ ರೈ ಅವರು ಕೃತಿ ಲೋಕಾರ್ಪಣೆಗೊಳಿಸಲಿದ್ದು, ಸಾಹಿತಿ ಡಾ|ರಾಜಶೇಖರ್‌ಹಳೆಮನೆ ಕೃತಿಯ ಕುರಿತು ಅವಲೋಕನ ಮಾಡಲಿದ್ದಾರೆ.

ಅಲೋಶಿಯಸ್ ವಿವಿಯ ಕುಲಪತಿ ಡಾ|ಪ್ರವೀಣ್ ಮಾರ್ಟಿಸ್ ಎಸ್ ಜೆ, ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ|ನಾಗಪ್ಪ ಗೌಡ, ಲೇಖಕರು, ಜಾನಪದ ವಿದ್ವಾಂಸ ಡಾ|ಕೆ.ಚಿನ್ನಪ್ಪ ಗೌಡ ಅವರು ಭಾಗವಹಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಕಳ ಕ್ರಿಯೆಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವಥ್ ಎಸ್ ಎಲ್ ಅವರು ವಹಿಸಲಿದ್ದಾರೆ.

ದೈವನರ್ತಕ ಶೇಖರ ಪರವ ಅವರಿಗೆ ಗೌರವ ಸಮ್ಮಾನ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

Prajavani 18-12-2025

# ‘ಭೂತಾರಾಧನೆ’ ಕೃತಿ ಬಿಡುಗಡೆ 20ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಜಾನಪದ ವಿದ್ವಾಂಸ ಕೆ.ಚಿನ್ನಪ್ಪ ಗೌಡ ಅವರ ಸಂಶೋಧನಾ ಕೃತಿ ‘ಭೂತಾರಾಧನೆ- ಮಾಯದ ನಡೆ ಜೋಗದ ನುಡಿ’ ಲೋಕಾರ್ಪಣೆ ಕಾರ್ಯಕ್ರಮ ಕಾರ್ಕಳದ ಕ್ರಿಯೆಟಿವ್ ಪುಸ್ತಕ ಮನೆ ಮತ್ತು ಸೇಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಯೋಗದಲ್ಲಿ ಅಲೋಶಿಯಸ್ ಕಾಲೇಜಿನ ಎಲ್.ಎಫ್. ರಸ್ಕಿನ್ಹಾ ಸಭಾಭವನದಲ್ಲಿ ಡಿ.20ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ನಿವೃತ್ತ ಕುಲಪತಿ ಪ್ರೊ. ಬಿ.ಎ.ವಿವೇಕ್ ರೈ ಕೃತಿ ಬಿಡುಗಡೆಗೊಳಿಸುವರು. ಸಾಹಿತಿ ರಾಜಶೇಖರ್ ಹಳೆಮನೆ ಅವಲೋಕನ ಮಾಡುವರು. ಕ್ರಿಯೆಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವಥ್ ಎಸ್.ಎಲ್ ಅಧ್ಯಕ್ಷತೆ ವಹಿಸುವರು. ದೈವ ನರ್ತಕ ಶೇಖರ ಪರವ ಅವರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ.

ಚಿನ್ನಪ್ಪ ಗೌಡರ ‘ಭೂತಾರಾಧನೆ -ಜಾನಪದೀಯ ಅಧ್ಯಯನ’ ಗ್ರಂಥವು 35 ವರ್ಷಗಳ ಹಿಂದೆ ಪ್ರಕಟವಾಗಿದ್ದು, ಈ ಗ್ರಂಥದ ವಿಸ್ತೃತ ಆವೃತ್ತಿ ‘ಭೂತಾರಾಧನೆ - ಮಾಯದ ನಡೆ ಜೋಗದ ನುಡಿ’ ಸಂಪುಟ. ಈ ಆವೃತ್ತಿಯಲ್ಲಿ 12 ಅಧ್ಯಾಯಗಳಿವೆ. ಭೂತಾರಾಧನೆಯ ಪರಿವರ್ತನೆಯ ನೆಲೆಗಳು, ಸಾಮಾಜಿಕ ಧ್ವನಿಗಳು, ಸಾಂಸ್ಕೃತಿಕ ಅನನ್ಯತೆ, ಅಧ್ಯಯನ ವಿಸ್ತಾರಗೊಂಡ ಸೂಕ್ಷ್ಮತೆಯ ಆಯಾಮಗಳು, ಪಾಡ್ದನ ಪಠ್ಯಗಳು, ಆರಾಧನೆಯ ರಂಗಪಠ್ಯಗಳಾಗುವ ಪ್ರಕ್ರಿಯೆ ಇವುಗಳಿಗೆ ಸಂಬಂಧಿಸಿದ ಅಧ್ಯಾಯಗಳು ಇವೆ ಎಂದು ಪ್ರಕಟಣೆ ತಿಳಿಸಿದೆ.

Deccan Herald 18-12-2025

# Bhootaradhane - Maayada Nade Jogada Nudi to be released on December 20

**MANGALURU, DHNS:** A special publication by Creative Pusthaka Mane, Karkala, brought out in collaboration with the Department of Kannada at the St Aloysius Deemed-to-be-University, 'Bhootaradhane – Maayada Nade Jogada Nudi' by noted folklorist Dr K Chinnappa Gowda will be released on December 20 at 3 pm at the L F Rusqin Hall of the St Aloysius Deemed-to-be University.

The book will be released by former Vice-Chancellor and eminent folklorist Prof B A Vivek Rai, while writer Dr Rajashekar Halemane will present an overview of the work.

The event will be attended by St Aloysius Deemed-to-be-University Vice-Chancellor Dr Praveen Martis, Chairman of SVP Institute of Kannada Studies, Mangalore University, Dr Nagappa Gowda, and Dr K Chinnappa Gowda as chief guests.

Vijayakarnataka 16-12-2025

# ಅತಿಥಿ ಉಪನ್ಯಾಸ

**ಮಂಗಳೂರು:** ಕರ್ನಾಟಕ ಸರಕಾರದ ಭಾಷೆ ಮತ್ತು ಸಂಸ್ಕೃತಿ ವಿಭಾಗದ ಸಹಯೋಗದೊಂದಿಗೆ ಸೈಂಟ್ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ಕಲಾ ಮತ್ತು ಮಾನವಿಕ ಶಾಲೆಯ ಇತಿಹಾಸ ವಿಭಾಗದ ವತಿಯಿಂದ ನಿರ್ಭೀತ ಮಹಿಳೆ ಒನಕೆ ಓಬವ್ವರ ತ್ಯಾಗವನ್ನು ಸ್ಮರಿಸಲು ಚಿಂತನಶೀಲ ಅತಿಥಿ ಉಪನ್ಯಾಸ ಮಂಗಳವಾರ ನಡೆಯಿತು.

ಲೇಖಕ ಮಹೇಶ್ ನಾಯಕ್, ಆಧುನಿಕ ಸಂದರ್ಭದಲ್ಲಿ ಓಬವ್ವನ ಪ್ರಸ್ತುತತೆಯ ಕುರಿತು ಉಪನ್ಯಾಸ ನೀಡಿದರು.

ಕಲಾ ಮತ್ತು ಮಾನವಿಕ ಶಾಲೆಯ ಡೀನ್ ಡಾ. ರೋಸ್ ವೀರಾ ಡಿಸೋಜ, ರಾಜ್ಯ ಭಾಷೆ ಮತ್ತು ಸಂಸ್ಕೃತಿ ವಿಭಾಗದ ಸಹಾಯಕ ನಿರ್ದೇಶಕ ರಾಜೇಶ್, ಇತಿಹಾಸ ವಿಭಾಗದ ಮುಖ್ಯಸ್ಥೆ ಡಾ. ಮೋನಾ ಮೆಂಡೋನ್ಸಾ, ಸಿಬ್ಬಂದಿಗಳಾದ ಕಿಶೋರ್ ಚಂದ್ರ, ಶಿಲ್ಪಲತಾ ಮತ್ತು ವಿದ್ಯಾರ್ಥಿ ಸಂಯೋಜಕ ಲೋಕೇಶ್ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಭವಿತ ಕಾರ್ಯಕ್ರಮ ನಿರೂಪಿಸಿದರು.

*Times of India 17-12-2025*

## ALMUN3.0 valedictory held

The valedictory ceremony of Aloysius Model United Nations (ALMUN) 3.0 was held recently. The ceremony marked the successful conclusion of three days of insightful discussions and diplomatic engagements among delegates from different colleges. Dr Shalini, HoD of psychology, highlighted the importance of ALMUN as a platform for nurturing leadership, diplomacy, and critical thinking among students.

*Varthabharathi 18-12-2025*

## ಅಲೋಶಿಯಸ್ ವಿವಿಯಲ್ಲಿ 'ಅಲ್ಮನ್ 3.0' ಸಮಾರೋಪ

ಮಂಗಳೂರು, ಡಿ.17: ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಆರ್ಟ್ಸ್ ಆಂಡ್ ಹ್ಯುಮಾನಿಟೀಸ್ ನಿಕಾಯದ ರಾಜ್ಯಶಾಸ್ತ್ರ ಮತ್ತು ಮನಃಶಾಸ್ತ್ರ ವಿಭಾಗಗಳು ಆಯೋಜಿಸಿದ್ದ 'ಅಲ್ಮನ್ 3.0' ಮೂರು ದಿನಗಳ ಕಾರ್ಯಕ್ರಮ ಸಮಾರೋಪಗೊಂಡಿತು.




ಮುಖ್ಯ ಅತಿಥಿಯಾಗಿ ಅನಿವಾಸಿ ಉದ್ಯಮಿ ಮೈಕೆಲ್ ಡಿಸೋಜ ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಅಲೋಶಿಯಸ್ ವಿವಿಯ ಅಡ್ಲಿನ್ ಬ್ಲಾಕ್ ನಿರ್ದೇಶಕ ಡಾ.ಚಾರ್ಲ್ಸ್ ವಿ. ಫುರ್ಟಾಡೊ ವಹಿಸಿದ್ದರು. ಈ ಸಂದರ್ಭದಲ್ಲಿ ವಿಜೇತರಿಗೆ ಗಣ್ಯರು ಬಹುಮಾನ ವಿತರಿಸಿದರು.

ವೇದಿಕೆಯಲ್ಲಿ ಕಾರ್ಯಕ್ರಮದ ಮುಖ್ಯ ಸಲಹೆಗಾರ ಡಾ.ರೋಸ್ ವೀರಾ ಡಿಸೋಜ ಮತ್ತು ಸಿಬ್ಬಂದಿ ಸಂಚಾಲಕರಾದ ಡಾ.ಶಾಲಿನಿ ಅಯ್ಯಪ್ಪ, ಡಾ.ಶಕೀಲಾ ಹೆಗ್ಡೆ ಮತ್ತು ಮಹಾನಿರ್ದೇಶಕಿ ಶ್ರಾವ್ಯಾ ಪ್ರಮೋದ್ ಉಪಸ್ಥಿತರಿದ್ದರು.

ಪ್ರಧಾನ ಕಾರ್ಯದರ್ಶಿ ವ್ಯಾಟ್ಸನ್ ಸಾಯಿ ಪ್ರಸಾದ್ ವಂದಿಸಿದರು.

*Udayavani 18-12-2025*

# ಅಲೋಶಿಯಸ್ ವಿವಿಯಲ್ಲಿ ಅಲ್ಮನ್ 3.0 ಸಮಾರೋಪ

**ಮಹಾನಗರ, ಡಿ.17:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಆರ್ಟ್ಸ್ ಆ್ಯಂಡ್ ಹ್ಯುಮಾನಿಟೀಸ್ ನಿಕಾಯದ ರಾಜ್ಯಶಾಸ್ತ್ರ ಮತ್ತು ಮನಃಶಾಸ್ತ್ರ ವಿಭಾಗಗಳು ಆಯೋಜಿಸಿದ್ದ ವಿಶ್ವಸಂಸ್ಥೆಯ ಚರ್ಚಾ ಮಾದರಿಯನ್ನು ಅನುಸರಿಸುವ ಕಾರ್ಯಕ್ರಮ ಅಲ್ಮನ್ 3.0 ಇದರ ಸಮಾರೋಪ ಸಮಾರಂಭ ಇತ್ತೀಚೆಗೆ ನಡೆಯಿತು.



ಉದ್ಯಮಿ ಮೈಕೆಲ್ ಡಿ'ಸೋಜಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ, ಇಂದಿನ ಜಗತ್ತಿನಲ್ಲಿ ಜವಾಬ್ದಾರಿಯುತ ಮತ್ತು ನೈತಿಕ ನಾಗರಿಕರಾಗಿ ಬಾಳಬೇಕು. ಕಷ್ಟಕರವಾದಾಗಲೂ ಸರಿಯಾದದ್ದನ್ನು ಆರಿಸಿಕೊಳ್ಳಲು ಮತ್ತು ಅವರ ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಸಮಗ್ರತೆ ಮತ್ತು ಸಹಾನುಭೂತಿಯನ್ನು ಎತ್ತಿ ಹಿಡಿಯಲು ಅವರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಅಲೋಶಿಯಸ್ ವಿ.ವಿ.ಯ ಅಡ್ಮಿನ್ ಬ್ಲಾಕಿನ ನಿರ್ದೇಶಕ ಡಾ| ಚಾರ್ಲ್ಸ್ ವಿ. ಫುರ್ಟಾಡೊ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದ ಮುಖ್ಯ ಸಲಹೆಗಾರ ಡಾ| ರೋಸ್ ವೀರಾ ಡಿ'ಸೋಜಾ ಮತ್ತು ಸಿಬಂದಿ ಸಂಚಾಲಕ ಡಾ| ಶಾಲಿನಿ ಅಯ್ಯಪ್ಪ ಡಾ| ಶಕೀಲಾ ಹೆಗ್ಡೆ ಪ್ರಧಾನ ಕಾರ್ಯದರ್ಶಿ ವತ್ಸಿನ ಸಾಯಿ ಪ್ರಸಾದ್ ಮತ್ತು ಮಹಾನಿರ್ದೇಶಕಿ ಶ್ರಾವ್ಯ ಪ್ರಮೋದ್ ಉಪಸ್ಥಿತರಿದ್ದರು. ವ್ಯಾಟ್ಸನ್ ಸಾಯಿ ಪ್ರಸಾದ್ ವಂದಿಸಿದರು.

*Prajavani 19-12-2025*

# ಅಲೋಶಿಯಸ್‌ನಲ್ಲಿ ಜಾಗೃತಿ ಉಪನ್ಯಾಸ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ ವ್ಯವಹಾರ ಆಡಳಿತ ವಿಭಾಗದ ವತಿಯಿಂದ 'ಡಿಜಿಟಲ್ ಸುರಕ್ಷತೆ ಮೊದಲು: ಸೈಬರ್ ವಂಚನೆಗಳ ವಿರುದ್ಧ ಕಾವಲು' ವಿಷಯದ ಬಗ್ಗೆ ಈಚೆಗೆ ಉಪನ್ಯಾಸ ಕಾರ್ಯಕ್ರಮವನ್ನು ಅಲೋಶಿಯಸ್ ಕಾಲೇಜಿನ ಎಲ್. ಎಫ್. ರಸ್ಕ್ವಿನ್ಹಾ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಯಿತು.



ಪಿಎಸ್‌ಐ ಮಾರುತಿ ಪಿ.

ಸಂಪನ್ಮೂಲ ವ್ಯಕ್ತಿಯಾಗಿದ್ದ ಪಾಂಡೇಶ್ವರದ ದಕ್ಷಿಣ ಪೊಲೀಸ್ ಠಾಣೆಯ ಪಿಎಸ್‌ಐ ಮಾರುತಿ ಪಿ. ಅವರು ವಿವಿಧ ರೀತಿಯ ಸೈಬರ್ ವಂಚನೆಗಳು ಮತ್ತು ಅದನ್ನು ತಡೆಗಟ್ಟುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಸಿಬ್ಬಂದಿ ಸಂಚಾಲಕಿ ಕ್ಯಾರಲ್ ಶರೆಲ್ ಪಿರೇರಾ ಸ್ವಾಗತಿಸಿ, ಡಿಜಿಟಲ್ ಯುಗದಲ್ಲಿ ಸೈಬರ್ ಸುರಕ್ಷತೆಯ ಮಹತ್ವವನ್ನು ವಿವರಿಸಿದರು. ಮಂಗಳೂರು ಉತ್ತರ ಪೊಲೀಸ್ ಠಾಣೆಯ ಎಎಸ್‌ಐ ಬಾಬು ಅವರು ವಿಶೇಷ ಆಹ್ವಾನಿತರಾಗಿದ್ದರು. ಸುಮಾರು 450 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕ್ಯಾರಲ್ ಶರೆಲ್ ಪಿರೇರಾ ವಂದಿಸಿದರು.

Udayavani 18-12-2025

# ಗ್ಲೆನ್‌ಸನ್ ಟೋನಿ ಅವರಿಗೆ ಪಿಎಚ್.ಡಿ.



**ಮಹಾನಗರ, ಡಿ. 17:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಅಸಿಸ್ಟೆಂಟ್ ಡೀನ್ ಗ್ಲೆನ್‌ಸನ್ ಟೋನಿ ಅವರ 'ಡಿಸೈನ್ ಅಂಡ್ ಡೆವಲಪ್‌ಮೆಂಟ್ ಆಫ್ ಅಡಾಪ್ಟಿವ್ ಹೆಡ್‌ಲ್ಯಾಂಪ್ಸ್ ಇನ್ ಆಟೋಮೊಬೈಲ್ ಯೂಸಿಂಗ್ ಡೀಪ್ ಲರ್ನಿಂಗ್ ಮಾಡೆಲ್ಸ್' ಎಂಬ ಮಹಾಪ್ರಬಂಧಕ್ಕಾಗಿ ಪಂಜಾಬಿನ ಲವ್ಲೀ ಪ್ರೊಫೆಶನಲ್ ಯುನಿವರ್ಸಿಟಿಯು ಪಿಎಚ್.ಡಿ. ನೀಡಿದೆ.

ಅವರು ಪಂಜಾಬಿನ ಲವ್ಲೀ ಪ್ರೊಫೆಷನಲ್ ಯುನಿವರ್ಸಿಟಿಯ ಸ್ಕೂಲ್ ಆಫ್ ಇಲೆಕ್ಟ್ರಾನಿಕ್ಸ್ ಅಂಡ್ ಇಲೆಕ್ಟ್ರಿಕಲ್ ಎಂಜಿನಿಯರಿಂಗ್ ಇದರ ಮುಖ್ಯಸ್ಥ ಡಾ| ಗೌರವ್ ಸೇಥಿ ಮತ್ತು ಪುಣೆಯ ಏಟನ್ ಇನ್ನೋವೇಶನ್ ಸೆಂಟರ್‌ನ ಸೀನಿಯರ್ ಎಂಜಿನಿಯರ್ ಡಾ| ಚೆರಿ ಭಾರ್ಗವ ಇವರ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ಮಂಡಿಸಿದ್ದರು. ಗ್ಲೆನ್‌ಸನ್ ಅವರು ಟೋನಿ ಜಾರ್ಜ್ ಹಾಗೂ ದಿ| ಶರ್ಲಿ ಟೋನಿ ಅವರ ಪುತ್ರ.

Varthabharathi 20-12-2025

# ಗ್ಲೆನ್‌ಸನ್‌ರಿಗೆ ಪಿಎಚ್‌ಡಿ ಪದವಿ



ಮಂಗಳೂರು, ಡಿ.19: ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಅಸಿಸ್ಟೆಂಟ್ ಡೀನ್ ಗ್ಲೆನ್‌ಸನ್ ಟೋನಿ ಅವರ 'ಡಿಸೈನ್ ಆಂಡ್ ಡೆವಲಪ್ ಮೆಂಟ್ ಆಫ್ ಅಡಾಪ್ಟಿವ್ ಹೆಡ್‌ಲ್ಯಾಂಪ್ಸ್ ಇನ್ ಆಟೊಮೊಬೈಲ್ ಯೂಸಿಂಗ್ ಡೀಪ್ ಲರ್ನಿಂಗ್ ಮಾಡೆಲ್ಸ್' ಎಂಬ ಮಹಾಪ್ರಬಂಧಕ್ಕಾಗಿ ಪಂಜಾಬಿನ ಲವ್ಲೀ ಪ್ರೊಫೆಷನಲ್ ಯುನಿವರ್ಸಿಟಿಯು ಪಿಎಚ್‌ಡಿ ಪದವಿಯನ್ನು ನೀಡಿ ಗೌರವಿಸಿದೆ.

ಅವರು ಪಂಜಾಬಿನ ಲವ್ಲೀ ಪ್ರೊಫೆಷನಲ್ ಯುನಿವರ್ಸಿಟಿಯ ಸ್ಕೂಲ್ ಆಫ್ ಇಲೆಕ್ಟ್ರಾನಿಕ್ಸ್ ಆಂಡ್ ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನ ಮುಖ್ಯಸ್ಥ ಡಾ.ಗೌರವ್ ಸೇಥಿ ಮತ್ತು ಪುಣೆಯ ಏಟನ್ ಇನ್ನೋವೇಶನ್ ಸೆಂಟರ್‌ನ ಸೀನಿಯರ್ ಇಂಜಿನಿಯರ್ ಡಾ.ಚೆರಿ ಭಾರ್ಗವ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ಮಂಡಿಸಿದ್ದರು. ಗ್ಲೆನ್‌ಸನ್ ಟೋನಿಯವರು ಟೋನಿ ಜಾರ್ಜ್ ಹಾಗೂ ದಿ.ಶರ್ಲಿ ಟೋನಿ ದಂಪತಿಯ ಪುತ್ರ.

*Kannadaprabha 18-12-2025*

# ಅಲೋಶಿಯಸ್ ವಿವಿಯ ಗ್ಲೆನ್‌ಸನ್ ಟೋನಿಗೆ ಪಿಎಚ್‌ಡಿ ಪದವಿ



**ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಎಂಜಿನಿಯರಿಂಗ್‌ನ ಅಸಿಸ್ಟೆಂಟ್ ಡೀನ್ ಶ್ರೀ ಗ್ಲೆನ್‌ಸನ್ ಟೋನಿ ಅವರ 'ಡಿಸೈನ್ ಅಂಡ್ ಡೆವಲಪ್‌ಮೆಂಟ್ ಆಫ್ ಅಡಾಪ್ಟಿವ್ ಹೆಡ್‌ಲ್ಯಾಂಪ್ಸ್ ಇನ್ ಆಟೋಮೊಬೈಲ್ ಯೂಸಿಂಗ್ ಡೀಪ್ ಲರ್ನಿಂಗ್ ಮಾಡೆಲ್ಸ್' ಎಂಬ ಮಹಾಪ್ರಬಂಧಕ್ಕೆ ಪಂಜಾಬಿನ ಲವ್ಲೀ ಪ್ರೊಫೆಷನಲ್ ಯುನಿವರ್ಸಿಟಿಯು ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. ಅವರು ಪಂಜಾಬಿನ ಲವ್ಲೀ ಪ್ರೊಫೆಷನಲ್ ಯುನಿವರ್ಸಿಟಿಯ ಸ್ಕೂಲ್ ಆಫ್ ಎಲೆಕ್ಟ್ರಾನಿಕ್ಸ್ ಅಂಡ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಇದರ ಮುಖ್ಯಸ್ಥ ಡಾ. ಗೌರವ್ ಸೇಥಿ ಮತ್ತು ಪುಣೆಯ ಏಟನ್ ಇನ್ನೋವೇಶನ್ ಸೆಂಟರ್‌ನ ಸೀನಿಯರ್ ಎಂಜಿನಿಯರ್ ಡಾ. ಚೆರಿ ಭಾರ್ಗವ ಇವರ ಮಾರ್ಗದರ್ಶನದಲ್ಲಿ ತಮ್ಮ ಸಂಶೋಧನೆಯನ್ನು ಮಂಡಿಸಿದ್ದರು. ಗ್ಲೆನ್‌ಸನ್ ಟೋನಿರವರು ಟೋನಿ ಜಾರ್ಜ್ ಹಾಗೂ ದಿ. ಶರ್ಲಿ ಟೋನಿ ಇವರ ಪುತ್ರ.

*Udayavani 20-12-2025*

**ಬಾವುಟಗುಡ್ಡೆ:** ಅಖಿಲ ಭಾರತೀಯ ಚಾರೋಳಿ ಚುಟುಕು ಸಾಹಿತ್ಯ ಪರಿಷತ್ ಆಶ್ರಯದಲ್ಲಿ, ಸಂತ ಅಲೋಶಿಯಸ್ ಕಾಲೇಜಿನ ಕೊಂಕಣಿ ವಿಭಾಗ ಸಹಯೋಗದೊಂದಿಗೆ ಕಾಲೇಜಿನಲ್ಲಿ ಕ್ರಿಸ್ಮಸ್ ಆಚರಣೆ ನಡೆಯಿತು. ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಿದರು.



*Times of India 20-12-2025*

## Talk on coffee table books

A special event featuring a talk on coffee table books, 'The Echoes of the Corridors - A Portrait of St Aloysius University' and 'Touched by Angels - A Portrait of Father Muller Charitable Institutions', documenting the history of St Aloysius Institutions and Fr Muller Charitable Institutions, will be held on Dec 21. It aims to highlight the importance of visual storytelling in preserving institutional histor. The talk will be delivered by author and novelist Giselle Mehta, who will speak on on how coffeé table books serve as effective tools for recording heritage, blending archival photographs, documents, and narrative to present history in an accessible format. The programme will be graced by chief guests, Fr Melwyn Joseph Pinto, rector of St Aloysius Institutions, and Rev Praveen Martis, VC of St Aloysius. The event will be held at Camelot, Bejai Church Road, Mangaluru.

*Prajavani 21-12-2025*

# ‘ಅಪೂರ್ಣ ಮಾಹಿತಿಗೆ ದಾಖಲೀಕರಣ ಅಸ್ತ್ರ’

## ಚಿನ್ನಪ್ಪಗೌಡರ ‘ಭೂತಾರಾಧನೆ ಮಾಯದ ನಡೆ ಜೋಗದ ನುಡಿ’ ಕೃತಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದೈವಾರಾಧನೆ ಮತ್ತು ಭೂತಾರಾಧನೆಯ ಸಂಶೋಧನೆಯಲ್ಲಿ ದಾಖಲೀಕರಣವು ಡಿಜಿಟಲ್ ಯುಗದಲ್ಲಿ ಮಹತ್ವ ಪಡೆದುಕೊಂಡಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ಎ ವಿವೇಕ ರೈ ಅಭಿಪ್ರಾಯಪಟ್ಟರು.

ಕರಾವಳಿ ಲೇಖಕಿಯರ ವಾಚಕಿಯರ ಸಂಘ, ಮಂಗಳೂರು ವಿವಿ ಕನ್ನಡ ಅಧ್ಯಯನ ಸಂಸ್ಥೆಯ ಗಿಳಿವಿಂಡು, ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಸೇಂಟ್ ಅಲೋಶಿಯಸ್ ಕಾಲೇಜಿನ ಕನ್ನಡ ವಿಭಾಗ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪ್ರೊ.ಕೆ ಚಿನ್ನಪ್ಪ ಗೌಡ ಅವರ ‘ಭೂತಾರಾಧನೆ: ಮಾಯದ ನಡೆ ಜೋಗದ ನುಡಿ’ ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಡಿಜಿಟಲ್ ಮಾಧ್ಯಮಗಳು ಮುನ್ನೆಲೆಗೆ ಬಂದ ನಂತರ ಈಚೆಗೆ ದೈವಗಳ ಬಗ್ಗೆಯೂ ಅಪೂರ್ಣ ಮಾಹಿತಿಗಳನ್ನು ಹಂಚಿಕೊಳ್ಳುವವರು ಇದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ಇದೇ ಅಂತಿಮ ಎಂದು ಹೇಳುತ್ತಾರೆ. ದೈವ ಹುಟ್ಟಿದ್ದು ಹೀಗೆ, ಅದರ ಸಂಚಾರ ಹೀಗೀಗೆ ಎಂದು ವಾದಿಸುತ್ತಾರೆ. ಯುವ ಸಂಶೋಧಕರು ಇಂಥ ಮಾಹಿತಿಗಳನ್ನು ನಂಬಬಾರದು, ನೆಚ್ಚಿಕೊಳ್ಳಲೂಬಾರದು ಎಂದು ವಿವೇಕ ರೈ ಸಲಹೆ ನೀಡಿದರು.

‘ಸಂಶೋಧನೆ ಸುಲಭದ ಕೆಲಸವಲ್ಲ. ಪೂರ್ವಸಿದ್ಧತೆ, ಬರವಣಿಗೆ ಮತ್ತು ಹೊರಜಗತ್ತಿಗೆ ಮಂಡಿಸುವ ಪ್ರತಿ ಹಂತದಲ್ಲೂ ಎಚ್ಚರದಿಂದ ಇರಬೇಕು. ದೈವಾರಾಧನೆಯ ವಿಷಯದಲ್ಲಿ ಈ ಪ್ರಜ್ಞೆ ಅತ್ಯಂತ ಸೂಕ್ಷ್ಮವಾಗಿರಬೇಕು’ ಎಂದ ಅವರು ಭೂತಾರಾಧನೆ ಮತ್ತು ದೈವಾರಾಧನೆ ಪದಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ. ಸಂಶೋಧನೆಯ ಮೂಲಕ ಇವುಗಳನ್ನು ದಾಖಲಿಸಿಕೊಳ್ಳುವಾಗ ಅನುಕೂಲಕ್ಕೆ ತಕ್ಕಂತೆ ಈ ಪದಗಳನ್ನು ಬಳಸಿಕೊಳ್ಳಬಹುದಾಗಿದೆ’ ಎಂದರು.

‘ದೈವಾರಾಧನೆ ಮತ್ತು ಯಕ್ಷಗಾನ ಕರಾವಳಿಯ ಅಸ್ಮಿತೆ. ಈ ಪ್ರಕಾರಗಳ ಮೂಲವನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಹೀಗಾಗಿ ಇವುಗಳ ಸಮಗ್ರ ದಾಖಲೀಕರಣವೂ ಮುಖ್ಯ. ಅದು ಇಲ್ಲದೇ ಹೋದರೆ ಪಾರ್ಶ್ವಿಕ ತೀರ್ಮಾನಗಳೇ ವಿಜೃಂಭಿಸುವ ಸಾಧ್ಯತೆ ಇದೆ. ಧಾರ್ಮಿಕವೂ ರಂಗಭೂಮಿಯ ಲಕ್ಷಣವೂ ಇರುವ ದೈವಾರಾಧನೆಯಲ್ಲಿ ಆಗಿರುವ ಬದಲಾವಣೆಗಳನ್ನು ತಿಳಿಯಲು ದಾಖಲೀಕರಣವೇ ಮುಖ್ಯ. ವೈದಿಕ ಧರ್ಮ ಬಂದ ನಂತರ ದೈವಾರಾಧನೆಯಲ್ಲಿ ಆಗಿರುವ ಬದಲಾವಣೆಯನ್ನು ‘ಭೂತಾರಾಧನೆ: ಮಾಯದ ನಡೆ ಜೋಗದ ನುಡಿ’ ಕೃತಿಯಲ್ಲಿ ಆಧಾರ ಸಹಿತ ವಿವರಿಸಲಾಗಿದೆ. ಕ್ಷೇತ್ರ ಕಾರ್ಯ ಅದಕ್ಕೆ ಬಲ ತುಂಬಿದೆ. 90ರ ದಶಕದಲ್ಲಿ ಭಾರತದಲ್ಲಿ ಉಂಟಾದ ಆರ್ಥಿಕ ಮತ್ತು ಧಾರ್ಮಿಕ ಬದಲಾವಣೆಯ ನಂತರ ದೈವಾರಾಧನೆಯಲ್ಲೂ ಮಹತ್ವದ ಬದಲಾವಣೆ ಆಗಿದೆ ಎಂಬ ವಿವರ ಗಮನಾರ್ಹ’ ಎಂದು ವಿವೇಕ ರೈ ಹೇಳಿದರು.

ಕೃತಿಯನ್ನು ಅವಲೋಕಿಸಿದ ವಿಮರ್ಶಕ ರಾಜಶೇಖರ ಹಳೆಮನೆ ‘ಚರಿತ್ರೆ, ಪುರಾಣ, ಪರಂಪರೆ, ನಡೆ-ನುಡಿ ಮೇಳೈಸಿರುವ ಕೃತಿಯಲ್ಲಿ ಲೇಖಕರ ವಿದ್ವತ್ತು ಎದ್ದು ಕಾಣಿಸುತ್ತದೆ. ಸಂವೇದನೆ ಸೃಷ್ಟಿಸುವ ಕಲೆ ಈ ಕೃತಿಯಲ್ಲಿದೆ’ ಎಂದರು.

ಕಾಪುಮಜಲಿನ ದೈವನರ್ತಕ ಶೇಖರ ಪರವ ಅವರನ್ನು ಗೌರವಿಸಲಾಯಿತು. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವತ್ಥ್ ಎಸ್.ಎಲ್ ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ನಾಗಪ್ಪ ಗೌಡ ಆರ್ ಪಾಲ್ಗೊಂಡಿದ್ದರು. ಪ್ರಿಯಾಂಕ ಸ್ವಾಗತಿಸಿ, ಮಹಾಲಿಂಗ ಭಟ್ ವಂದಿಸಿದರು. ದಿನೇಶ್ ನಾಯಕ್ ನಿರೂಪಿಸಿದರು.

**ಮುಖ್ಯಾಂಶಗಳು**

- ದೈವಾರಾಧನೆಯ ಸಂಶೋಧಕ ಅತ್ಯಂತ ಸೂಕ್ಷ್ಮವಾಗಿರಬೇಕು
- ಪಾರ್ಶ್ವಿಕ ಮಾಹಿತಿಗಳನ್ನು ಯುವ ಸಂಶೋಧಕರು ನಂಬಬಾರದು



‘ಭೂತಾರಾಧನೆ: ಮಾಯದ ನಡೆ ಜೋಗದ ನುಡಿ’ ಕೃತಿಯನ್ನು ಪ್ರೊ.ಬಿ.ಎ ವಿವೇಕ ರೈ (ಬಲದಿಂದ ಮೂರನೆಯವರು) ಬಿಡುಗಡೆ ಮಾಡಿದರು. ಅಶ್ವತ್ಥ್ ಎಸ್ ಎಲ್, ಪ್ರೊ.ಕೆ ಚಿನ್ನಪ್ಪ ಗೌಡ, ಮಹಾಲಿಂಗ ಭಟ್, ರಾಜಶೇಖರ ಹಳೆಮನೆ ಮತ್ತು ನಾಗಪ್ಪಗೌಡ ಆರ್ ಪಾಲ್ಗೊಂಡಿದ್ದರು

**ಕೃತಿ ಮಾಹಿತಿ**

**ಕೃತಿ:** ಭೂತಾರಾಧನೆ: ಮಾಯದ ನಡೆ ಜೋಗದ ನುಡಿ
**ಲೇಖಕ:** ಪ್ರೊ.ಕೆ.ಚಿನ್ನಪ್ಪ ಗೌಡ
**ಪ್ರಕಾಶಕರು:** ಕ್ರಿಯೇಟಿವ್ ಪುಸ್ತಕ ಮನೆ
**ಪುಟಗಳು:** 512
**ಬೆಲೆ:** ₹ 550 (ಸಾಧಾರಣ): ₹ 600 (ವಿಶೇಷ ಪ್ರತಿ)

*Udayavani 22-12-2025*

## ಅಲೋಶಿಯಸ್ ವಿ.ವಿ.ಯಲ್ಲಿ ಹಿಂದಿ ಭಾಷಣ ಸ್ಪರ್ಧೆ

# ಕೌಶಲವೇ ಜೀವನದ ಶಕ್ತಿಶಾಲಿ ಅಸ್ತ್ರ: ಡಾ| ಮುಕುಂದ ಪ್ರಭು

**ಬಾವುಟಗುಡ್ಡೆ, ಡಿ. 21:** ಸಂತ ಅಲೋಶಿಯಸ್ ವಿ.ವಿ. ಮಂಗಳೂರು ಮತ್ತು ಬ್ಯಾಂಕ್ ಆಫ್ ಬರೋಡಾ ಮಂಗಳೂರು ಸಂಯುಕ್ತಾಶ್ರಯದಲ್ಲಿ ಹಿಂದಿ ಪ್ರಬಂಧ ಬರವಣಿಗೆ ಮತ್ತು ಭಾಷಣ ಸ್ಪರ್ಧೆಗಳನ್ನು ಆಯೋಜಿಸಲಾಯಿತು.

ಜ. 10ರಂದು ಆಚರಿಸಲಿರುವ ವಿಶ್ವ ಹಿಂದಿ ದಿನ - 2026ದ ಅಂಗವಾಗಿ ಈ ಸ್ಪರ್ಧೆಗಳು ರಾಬರ್ಟ್ ಸಿಕ್ವೇರಾ ಸಭಾಂಗಣದಲ್ಲಿ ನಡೆದವು. ಅಧ್ಯಕ್ಷತೆ ವಹಿಸಿದ್ದ ಡಾ| ಮುಕುಂದ ಪ್ರಭು ಮಾತನಾಡಿ, ಇಂದಿನ ಕಾಲದಲ್ಲಿ ಕೌಶಲವೇ ಜೀವನದ ಅತ್ಯಂತ ಶಕ್ತಿಶಾಲಿ ಅಸ್ತ್ರ ಎಂದು ಅಭಿಪ್ರಾಯಪಟ್ಟರು.

ಸ್ಪರ್ಧೆಗಳ ಉದ್ಘಾಟನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಬ್ಯಾಂಕ್ ಆಫ್ ಬರೋಡಾ ಮಂಗಳೂರು ಶಾಖೆಯ ಮುಖ್ಯ ವ್ಯವಸ್ಥಾಪಕ (ರಾಜಭಾಷಾ) ಡಾ| ಬಾಲಮುರುಗನ್ ಅವರು ಭಾರತೀಯ ಭಾಷೆಗಳು ಪರಸ್ಪರ ಸಂಪರ್ಕ ಸಾಧಿಸುವ ಕಾರ್ಯ ಮಾಡುತ್ತವೆ ಎಂದು ಹೇಳಿದರು.

ವಿಶೇಷ ಅತಿಥಿ ಬ್ಯಾಂಕ್ ಆಫ್ ಬರೋಡಾ ಮಂಗಳೂರು ಶಾಖೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜ್ಯೋತಿ ರಾಜ ಅವರು ವಿದ್ಯಾರ್ಥಿಗಳನ್ನು ಸ್ಟಾರ್ಟ್-ಅಪ್ ಆರಂಭಿಸಲು



ಪ್ರೇರೇಪಣೆ ನೀಡಿದರು.

ಕಾರ್ಯಕ್ರಮದ ಸಂಯೋಜಕ ಡಾ| ಮಹಬೂಬ್ ಅಲಿ ಎ. ನದಾಫ ಸ್ವಾಗತಿಸಿ, ಅರ್ಷಿತ್ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ಹಿಂದಿ ಪ್ರಬಂಧ ಬರವಣಿಗೆಯ ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ 2020: ವಿದ್ಯಾರ್ಥಿಗಳಿಗಾಗಿ ಸವಾಲುಗಳು ಮತ್ತು ಅವಕಾಶಗಳು, ಭಾಷಣ ಸ್ಪರ್ಧೆಯ ವಿಷಯ ‘ಸಂಪರ್ಕ ಭಾಷೆಯಾಗಿ ಭಾರತೀಯ ಭಾಷೆಗಳು’ ಎಂಬುವುದಾಗಿತ್ತು. ವಿಶ್ವವಿದ್ಯಾಲಯದ 40 ಮಂದಿ ಸ್ಪರ್ಧಾಳುಗಳು ಭಾಗವಹಿಸಿದ್ದರು.

Varthabharathi 23-12-2025

# ‘ಭೂತಾರಾಧನೆ: ಮಾಯದ ನಡೆ ಜೋಗದ ನುಡಿ’ ಕೃತಿ ಬಿಡುಗಡೆ



ಮಂಗಳೂರು, ಡಿ.22: ಡಿಜಿಟಲ್ ಯುಗದಲ್ಲಿ ದೈವಾರಾಧನೆ ಮತ್ತು ಭೂತಾರಾಧನೆಯ ಸಂಶೋಧನೆಯಲ್ಲಿ ದಾಖಲೀಕರಣವು ಹೆಚ್ಚು ಮಹತ್ವ ಪಡೆದುಕೊಂಡಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಅಭಿಪ್ರಾಯಪಟ್ಟಿದ್ದಾರೆ.

ಕರಾವಳಿ ಲೇಖಕಿಯರ ವಾಚಕಿಯರ ಸಂಘ, ಮಂಗಳೂರು ವಿವಿ ಕನ್ನಡ ಅಧ್ಯಯನ ಸಂಸ್ಥೆಯ ಗಿಳಿವಿಂಡು, ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಸಂತ ಅಲೋಶಿಯಸ್ ಕಾಲೇಜಿನ ಕನ್ನಡ ವಿಭಾಗವು ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪ್ರೊ.ಕೆ.ಚಿನ್ನಪ್ಪ ಗೌಡ ಅವರ ‘ಭೂತಾರಾಧನೆ ಮಾಯದ ನಡೆ ಜೋಗದ ನುಡಿ’ ಕೃತಿಯನ್ನು ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದ್ದರು.

ಡಿಜಿಟಲ್ ಮಾಧ್ಯಮಗಳು ಮುನ್ನಲೆಗೆ ಬಂದ ಬಳಿಕ ದೈವಗಳ ಬಗ್ಗೆಯೂ ಅಪೂರ್ಣ ಮಾಹಿತಿಗಳನ್ನು ಹಂಚಿಕೊಳ್ಳುವವರು ಇದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ಇದೇ ಅಂತಿಮ ಎಂದು ಹೇಳುತ್ತಾರೆ. ದೈವ ಹುಟ್ಟಿದ್ದು ಹೀಗೆ, ಅದರ ಸಂಚಾರ ಹಾಗೆ ಎಂದೆಲ್ಲಾ ವಾದಿಸುತ್ತಾರೆ. ಯುವ ಸಂಶೋಧಕರು ಇಂತಹ ಅಪೂರ್ಣ ಮಾಹಿತಿಗಳನ್ನು ನಂಬಬಾರದು ಎಂದು ವಿವೇಕ ರೈ ಸಲಹೆ ನೀಡಿದರು.

ಸಂಶೋಧನೆ ಹೇಳಿದಷ್ಟು ಸುಲಭದ ಕೆಲಸವಲ್ಲ. ಅದಕ್ಕೆ ಪೂರ್ವಸಿದ್ಧತೆ ಅಗತ್ಯವಿದೆ. ಪ್ರತೀ ಹಂತದಲ್ಲೂ ಎಚ್ಚರದಿಂದ ಇರಬೇಕು. ದೈವಾರಾಧನೆಯ ವಿಷಯದಲ್ಲಿ ಈ ಪ್ರಜ್ಞೆ ಅತ್ಯಂತ ಸೂಕ್ಷ್ಮವಾಗಿರಬೇಕು ಎಂದ ವಿವೇಕ ರೈ ಭೂತಾರಾಧನೆ ಮತ್ತು ದೈವಾರಾಧನೆ ಪದಗಳ ಬಗ್ಗೆ ಚರ್ಚೆಗಳು ನಡೆಯುತ್ತವೆ. ಸಂಶೋಧನೆಯ ಮೂಲಕ ಅವುಗಳನ್ನು ದಾಖಲಿಸಿ ಕೊಳ್ಳುವಾಗ ಅನುಕೂಲಕ್ಕೆ ತಕ್ಕಂತೆ ಈ ಪದಗಳನ್ನು ಬಳಸಿಕೊಳ್ಳಬಹುದಾಗಿದೆ ಎಂದರು.

ವಿಮರ್ಶಕ ರಾಜಶೇಖರ್ ಹಳೆಮನೆ ಕೃತಿ ಯನ್ನು ಅವಲೋಕಿಸಿದರು. ಕಾಪುಮಜಲಿನ ದೈವನರ್ತಕ ಶೇಖರ ಪರವ ಅವರನ್ನು ಗೌರವಿಸಲಾಯಿತು. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹ ಸಂಸ್ಥಾಪಕ ಅಶ್ವಥ್ ಎಸ್.ಎಲ್. ಅಧ್ಯಕ್ಷತೆ ವಹಿಸಿದ್ದರು.

ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ನಾಗಪ್ಪ ಗೌಡ ಆರ್. ಉಪಸ್ಥಿತರಿದ್ದರು.

ಪ್ರಿಯಾಂಕಾ ಸ್ವಾಗತಿಸಿದರು. ಮಹಾಲಿಂಗ ಭಟ್ ವಂದಿಸಿದರು. ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

Udayavani 27-12-2025

/ 'ಭೂತಾರಾಧನೆ ಮಾಯದ ನಡೆ ಜೋಗದ ನುಡಿ' ಕೃತಿ ಬಿಡುಗಡೆ

# ದೈವಗಳ ವಿಷಯದಲ್ಲಿ ಸೂಕ್ಷ್ಮ ಪ್ರಜ್ಞೆ ಇರಲಿ: ಪ್ರೊ| ವಿವೇಕ ರೈ

**ಮಹಾನಗರ, ಡಿ. 26:** ದೈವಾರಾಧನೆ ಮತ್ತು ಭೂತಾರಾಧನೆಯ ಸಂಶೋಧನೆಯಲ್ಲಿ ಡಿಜಿಟಲ್ ಯುಗದಲ್ಲಿ ದಾಖಲೀಕರಣವು ಮಹತ್ವ ಪಡೆದುಕೊಂಡಿದೆ ಎಂದು ವಿಶ್ರಾಂತ ಕುಲಪತಿ ಪ್ರೊ| ಬಿ.ಎ. ವಿವೇಕ ರೈ ಹೇಳಿದ್ದಾರೆ.

ಕರಾವಳಿ ಲೇಖಕಿಯರ ವಾಚಕಿಯರ ಸಂಘ, ಮಂಗಳೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಗಿಳಿವಿಂಡು, ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಸೇಂಟ್ ಅಲೋಶಿಯಸ್ ಕಾಲೇಜಿನ ಕನ್ನಡ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪ್ರೊ| ಕೆ ಚಿನ್ನಪ್ಪ ಗೌಡ ಅವರ 'ಭೂತಾರಾಧನೆ: ಮಾಯದ ನಡೆ ಜೋಗದ ನುಡಿ' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಡಿಜಿಟಲ್ ಮಾಧ್ಯಮಗಳು ಮುನ್ನೆಲೆಗೆ ಬಂದ ಅನಂತರ ಈಚೆಗೆ ದೈವಗಳ ಬಗ್ಗೆಯೂ ಅಪೂರ್ಣ ಮಾಹಿತಿಗಳನ್ನು ಹಂಚಿಕೊಳ್ಳುವವರು ಇದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ಇದೇ ಅಂತಿಮ ಎಂದು ಹೇಳುತ್ತಾರೆ. ದೈವ ಹುಟ್ಟಿದ್ದು ಹೀಗೆ, ಅದರ ಸಂಚಾರ ಹೀಗೆ ಎಂದು ವಾದಿಸುತ್ತಾರೆ. ಯುವ ಸಂಶೋಧಕರು ಇಂಥ ಮಾಹಿತಿಗಳನ್ನು ನಂಬಬಾರದು, ನೆಚ್ಚಿಕೊಳ್ಳಲೂಬಾರದು ಎಂದು ಅವರು ಹೇಳಿದರು.


'ಭೂತಾರಾಧನೆ ಮಾಯದ ನಡೆ ಜೋಗದ ನುಡಿ' ಕೃತಿ ಬಿಡುಗಡೆ ಜರಗಿತು.

ಸಂಶೋಧನೆ ಸುಲಭದ ಕೆಲಸವಲ್ಲ, ಪೂರ್ವಸಿದ್ಧತೆ, ಬರವಣಿಗೆ ಮತ್ತು ಹೊರಜಗತ್ತಿಗೆ ಮಂಡಿಸುವ ಪ್ರತಿ ಹಂತದಲ್ಲೂ ಎಚ್ಚರದಿಂದ ಇರಬೇಕು. ದೈವಾರಾಧನೆಯ ವಿಷಯದಲ್ಲಿ ಈ ಪ್ರಜ್ಞೆ ಅತ್ಯಂತ ಸೂಕ್ಷ್ಮವಾಗಿರಬೇಕು ಎಂದು ವಿವೇಕ ರೈ ಹೇಳಿದರು.

ವೈದಿಕ ಧರ್ಮ ಬಂದ ಅನಂತರ ದೈವಾರಾಧನೆಯಲ್ಲಿ ಆಗಿರುವ ಬದಲಾವಣೆಯನ್ನು 'ಭೂತಾರಾಧನೆ: ಮಾಯದ ನಡೆ ಜೋಗದ ನುಡಿ' ಕೃತಿಯಲ್ಲಿ ಆಧಾರ ಸಹಿತ ವಿವರಿಸಲಾಗಿದೆ. ಕ್ಷೇತ್ರ ಕಾರ್ಯ ಅದಕ್ಕೆ ಬಲ ತುಂಬಿದೆ. 90ರ ದಶಕದಲ್ಲಿ ಭಾರತದಲ್ಲಿ ಉಂಟಾದ ಆರ್ಥಿಕ ಮತ್ತು ಧಾರ್ಮಿಕ ಬದಲಾವಣೆಯ ನಂತರ ದೈವಾರಾಧನೆಯಲ್ಲೂ ಮಹತ್ವದ ಬದಲಾವಣೆ ಆಗಿದೆ ಎಂಬ ವಿವರ ಗಮನಾರ್ಹ' ಎಂದು ಅವರು ಹೇಳಿದರು.

ಕೃತಿಯನ್ನು ಅವಲೋಕಿಸಿದ ವಿಮರ್ಶಕ ರಾಜಶೇಖರ ಹಳೆಮನೆ ಅವರು ಚರಿತ್ರೆ, ಪುರಾಣ, ಪರಂಪರೆ, ನಡೆ-ನುಡಿ ಮೇಳೈಸಿರುವ ಕೃತಿಯಲ್ಲಿ ಲೇಖಕರ ವಿದ್ವತ್ತು ಎದ್ದು ಕಾಣುತ್ತದೆ ಎಂದರು.

ಕಾಪುಮಜಲಿನ ದೈವನರ್ತಕ ಶೇಖರ ಪರವ ಅವರನ್ನು ಗೌರವಿಸಲಾಯಿತು. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವತ್ಥ್ ಎಸ್.ಎಲ್. ಅಧ್ಯಕ್ಷತೆ ವಹಿಸಿದ್ದರು.

ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ನಾಗಪ್ಪ ಗೌಡ ಆರ್. ಪಾಲ್ಗೊಂಡಿದ್ದರು. ಪ್ರಿಯಾಂಕ ಸ್ವಾಗತಿಸಿ, ಮಹಾಲಿಂಗ ಭಟ್ ವಂದಿಸಿದರು. ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು.

Samyuktha Karnataka 30-12-2025

# 'ಸಂಶೋಧನೆ ಸುಲಭದ ಕೆಲಸವಲ್ಲ'

## ಮಹತ್ವ ಪಡೆದುಕೊಂಡ ದೈವರಾಧನೆ ದಾಖಲೀಕರಣ; ವಿವೇಕ ರೈ

**ಸಂ.ಕ.ಸಮಾಚಾರ, ಮಂಗಳೂರು**

ದೈವಾರಾಧನೆ ಮತ್ತು ಭೂತಾರಾಧನೆಯ ಸಂಶೋಧನೆಯಲ್ಲಿ ಡಿಜಿಟಲ್ ಯುಗದಲ್ಲಿ ದಾಖಲೀಕರಣವು ಮಹತ್ವ ಪಡೆದುಕೊಂಡಿದೆ ಎಂದು ವಿಶ್ರಾಂತ ಕುಲಪತಿ ಪ್ರೊ.ಬಿ.ಎ.ವಿವೇಕ ರೈ ಹೇಳಿದ್ದಾರೆ.

ಕರಾವಳಿ ಲೇಖಕಿಯರ ವಾಚಕಿಯರ ಸಂಘ, ಮಂಗಳೂರು ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ಗಿಳಿವಿಂಡು, ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ಮತ್ತು ಸೇಂಟ್ ಅಲೋಶಿಯಸ್ ಕಾಲೇಜಿನ ಕನ್ನಡ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ವಿದ್ವಾಂಸ ಪ್ರೊ.ಕೆ.ಚಿನ್ನಪ್ಪ ಗೌಡ ಅವರ 'ಭೂತಾರಾಧನೆ ಮಾಯದ ನಡೆ ಜೋಗದ ನುಡಿ' ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಡಿಜಿಟಲ್ ಮಾಧ್ಯಮಗಳು ಮುನ್ನೆಲೆಗೆ ಬಂದ ಅನಂತರ ಈಚೆಗೆ ದೈವಗಳ ಬಗ್ಗೆಯೂ ಅಪೂರ್ಣ ಮಾಹಿತಿಗಳನ್ನು ಹಂಚಿಕೊಳ್ಳುವವರು ಇದ್ದಾರೆ. ದೈವ ಹುಟ್ಟಿದ್ದು ಹೀಗೆ, ಅದರ ಸಂಚಾರ ಹೀಗೆ ಎಂದು ವಾದಿಸುತ್ತಾರೆ. ಯುವ ಸಂಶೋಧಕರು ಇಂಥ ಮಾಹಿತಿಗಳನ್ನು ನಂಬಬಾರದು, ನೆಚ್ಚಿಕೊಳ್ಳಲೂಬಾರದು ಎಂದು ಅವರು ಹೇಳಿದರು.

ಸಂಶೋಧನೆ ಸುಲಭದ ಕೆಲಸವಲ್ಲ. ಪೂರ್ವಸಿದ್ಧತೆ,ಬರವಣಿಗೆ ಮತ್ತು ಹೊರಜಗತ್ತಿಗೆ ಮಂಡಿಸುವ ಪ್ರತಿ ಹಂತದಲ್ಲೂ ಎಚ್ಚರದಿಂದ ಇರಬೇಕು. ದೈವಾರಾಧನೆಯ ವಿಷಯದಲ್ಲಿ ಈ ಪ್ರಜ್ಞೆ ಅತ್ಯಂತ ಸೂಕ್ಷ್ಮವಾಗಿರಬೇಕು ಎಂದು ವಿವೇಕ ರೈ ಹೇಳಿದರು.

ವೈದಿಕ ಧರ್ಮ ಬಂದ ಅನಂತರ ದೈವಾರಾಧನೆಯಲ್ಲಿ ಆಗಿರುವ ಬದಲಾವಣೆಯನ್ನು 'ಭೂತಾರಾಧನೆ: ಮಾಯದ ನಡೆ ಜೋಗದ ನುಡಿ' ಕೃತಿಯಲ್ಲಿ ಆಧಾರ ಸಹಿತ ವಿವರಿಸಲಾಗಿದೆ. ಕ್ಷೇತ್ರ ಕಾರ್ಯ ಅದಕ್ಕೆ ಬಲ ತುಂಬಿದೆ. 90ರ ದಶಕದಲ್ಲಿ ಭಾರತದಲ್ಲಿ ಉಂಟಾದ ಆರ್ಥಿಕ ಮತ್ತು ಧಾರ್ಮಿಕ ಬದಲಾವಣೆಯ ನಂತರ ದೈವಾರಾಧನೆಯಲ್ಲೂ ಮಹತ್ವದ ಬದಲಾವಣೆ ಆಗಿದೆ ಎಂಬ ವಿವರ ಗಮನಾರ್ಹ' ಎಂದು ಅವರು ಹೇಳಿದರು.

ಕೃತಿಯನ್ನು ಅವಲೋಕಿಸಿದ ವಿಮರ್ಶಕ ರಾಜಶೇಖರ ಹಳೆಮನೆ ಅವರು ಚರಿತ್ರೆ, ಪುರಾಣ, ಪರಂಪರೆ, ನಡೆ–ನುಡಿ ಮೇಳೈಸಿರುವ ಕೃತಿಯಲ್ಲಿ ಲೇಖಕರ ವಿದ್ವತ್ತು ಎದ್ದು ಕಾಣಿಸುತ್ತದೆ ಎಂದರು.

ಕಾಪುಮಜಲಿನ ದೈವನರ್ತಕ ಶೇಖರ ಪರವ ಅವರನ್ನು ಗೌರವಿಸಲಾಯಿತು. ಕ್ರಿಯೇಟಿವ್ ಶಿಕ್ಷಣ ಪ್ರತಿಷ್ಠಾನದ ಸಹಸಂಸ್ಥಾಪಕ ಅಶ್ವತ್ಥ್ ಎಸ್.ಎಲ್. ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ವಿವಿ ಎಸ್ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ನಾಗಪ್ಪ ಗೌಡ ಆರ್. ಪಾಲ್ಗೊಂಡಿದ್ದರು. ಪ್ರಿಯಾಂಕ ಸ್ವಾಗತಿಸಿ, ಮಹಾಲಿಂಗ ಭಟ್ ವಂದಿಸಿದರು. ದಿನೇಶ್ ನಾಯಕ್ ಕಾರ್ಯಕ್ರಮ ನಿರೂಪಿಸಿದರು.



Udayavani 24-12-2025

# ಜರ್ನಿ ಥಿಯೇಟರ್ ಗ್ರೂಪ್ ವತಿಯಿಂದ 'ಸಾಹೇಬರು ಬರುತ್ತಾರೆ' ನಾಟಕ ಪ್ರದರ್ಶನ



**ಮಹಾನಗರ, ಡಿ. 23:** ಮಂಗಳೂರಿನ ಜರ್ನಿ ಥಿಯೇಟರ್ ಗ್ರೂಪ್‌ನ ಸದಸ್ಯರು ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಎಲ್.ಸಿ.ಆರ್.ಐ. ಸಭಾಂಗಣದಲ್ಲಿ ಸಾಹೇಬರು ಬರುತ್ತಾರೆ ನಾಟಕವನ್ನು ಪ್ರದರ್ಶಿಸಿದರು.

ನಾಟಕದ ಉದ್ಘಾಟನೆಯನ್ನು ಡಾ| ಆರ್. ನರಸಿಂಹ ಮೂರ್ತಿ ನೆರವೇರಿಸಿದರು. ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ಉಪಕುಲಪತಿ ವಂ| ಡಾ| ಪ್ರವೀಣ್ ಮಾರ್ಟಿಸ್ ಎಸ್. ಜೆ. ನಾಟಕಕ್ಕೆ ಶುಭ ಹಾರೈಸಿದರು. ತ್ರಿಪುರಾದ ಇಂಟರ್ ಕಲ್ಚರಲ್ ಥಿಯೇಟರ್ ಇನ್‌ಸ್ಟಿಟ್ಯೂಟ್ (ಐಸಿಟಿಐ) ನ ಪ್ರೊಫೆಷನಲ್ ಡಿಪ್ಲೊಮಾ ತರಬೇತಿಗೆ ಆಯ್ಕೆಯಾಗಿರುವ ಅವಿನಾಶ್ ರೈ ಕುಂಬ್ಳೆ ಅವರನ್ನು ಗೌರವಿಸಲಾಯಿತು.

ತ್ರಿಪುರಾದ ಐಸಿಟಿಐ ನ ದ್ವಿತೀಯ ವರ್ಷದ ವಿದ್ಯಾರ್ಥಿ, ಜರ್ನಿಯ ಸದಸ್ಯ ಮನೀಷ್ ಜೆ. ಪಿಂಟೋ, ನಾಟಕ ನಿರ್ದೇಶಕ ಚೇತನ್ ಗಣೇಶ್ ಪುರ, ಜರ್ನಿಯ ಶಶಾಂಕ್ ಐತಾಳ್ ಮತ್ತು ಮೇಘನಾ ಕುಂದಾಪುರ ಉಪಸ್ಥಿತರಿದ್ದರು.

ಬಳಿಕ ನಿಕೋಲಾಯ್ ಗೊಗೋಲ್ ನ 'ದಿ ಗವರ್ನಮೆಂಟ್ ಇನ್‌ಸ್ಪೆಕ್ಟರ್' ನ್ನು ಕೆ.ವಿ. ಅಕ್ಷರ ಮತ್ತು ಕೆ.ವಿ. ಸುಬ್ಬಣ್ಣ ಕನ್ನಡ ಅನುವಾದಿಸಿದ 'ಸಾಹೇಬರು ಬರುತ್ತಾರೆ' ನಾಟಕ ಪ್ರದರ್ಶನಗೊಂಡಿತು.

ಈ ನಾಟಕವನ್ನು ಯುವ ನಿರ್ದೇಶಕ ಚೇತನ್ ಗಣೇಶಪುರ ನಿರ್ದೇಶಿಸಿದ್ದರು. ನಾಟಕದಲ್ಲಿ ಮಂಗಳೂರಿನ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಮೊದಲ ಬಾರಿಗೆ ರಂಗದಲ್ಲಿ ಅಭಿನಯಿಸಿದರು.

ರಾಜೇಶ್ ಉಳ್ಳಾಲ ಧ್ವನಿ, ಶ್ರಾವಿಕ್ ಅಡ್ಕ ಬೆಳಕು, ವರುಣ್ ವಿ. ಆಚಾರ್ಯ ಸಂಗೀತ ನಿರ್ವಹಣೆ, ಚಿನ್ಮಯಿ ವಿ. ಭಟ್, ಮೇಘನಾ ಕುಂದಾಪುರ ಹಾಡಿನಲ್ಲಿ ಸಹಕರಿಸಿದ್ದರು. ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ ರಂಗ ಅಧ್ಯಯನ ಕೇಂದ್ರ ಸಹಯೋಗವನ್ನು ನೀಡಿತ್ತು.

*Udayavani 25-12-2025*

# ಹಂಚಿ ತಿಂದಾಗ ಮೌಲ್ಯವು ಇನ್ನಷ್ಟು ಹೆಚ್ಚಳ



**ಮಹಾನಗರ, ಡಿ. 24:** ಕ್ರಿಸ್ಮಸ್ ಆಚರಣೆಯು ಜಗತ್ತಿನ ಎಲ್ಲ ಜನರಲ್ಲೂ ಸಂತೋಷವನ್ನುಂಟು ಮಾಡುತ್ತದೆ. ನಾವು ನಮ್ಮಲ್ಲಿರುವ ವಸ್ತುಗಳನ್ನು ಇತರರಿಗೆ ಹಂಚಿ ತಿಂದಾಗ ಅದರ ಮೌಲ್ಯವು ಇನ್ನಷ್ಟು ಹೆಚ್ಚುತ್ತದೆ ಎಂದು ಸೆಂಟ್ ಅಲೋಶಿಯಸ್ ವಿ.ವಿ. ಫೈನಾನ್ಸ್ ಆಫೀಸರ್ ವಂ| ವಿಶ್ವಾಸ್ ಮಿಸ್ಕಿತ್ ಹೇಳಿದರು.

ಲೂರ್ಡ್ಸ್ ಸೆಂಟ್ರಲ್ ಸ್ಕೂಲ್‌ನಲ್ಲಿ ಆಯೋಜಿಸಿದ ಕ್ರಿಸ್ಮಸ್ - 2025ರ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ಪ್ರತಿಯೊಬ್ಬರ ತ್ಯಾಗ, ಸಹಾಯ ಪರೋಪಕಾರದಿಂದ ಇತರರಿಗೆ ಒಳ್ಳೆಯದನ್ನು ಉಂಟು ಮಾಡುವ ಗುಣಗಳನ್ನು ಬೆಳೆಸಿಕೊಳ್ಳಿ ಎಂದರು.

ಶಾಲೆಯ ಸಂಚಾಲಕ ವಂ| ಡಾ| ಜಾನ್ ಬ್ಯಾಪ್ಟಿಸ್ ಸಲ್ಡಾನ್ಹಾ ಅವರು, ಇತರರಿಗೆ ಸಹಾಯ ಮಾಡುವ ಜತೆಗೆ ಹೃದಯ ಶ್ರೀಮಂತಿಕೆ ಮೆರೆಯಬೇಕು ಎಂದರು.

ಶಾಲಾ ಪ್ರಾಂಶುಪಾಲ ವಂ| ಜಾನ್ಸನ್ ಎಲ್. ಸಿಕ್ವೇರಾ, ಬಿಜೈ ಚರ್ಚಿನ ಸಹಾಯಕ ಧರ್ಮಗುರು ವಂ| ರೊಯ್ಸನ್ ಮಿಸ್ಕಿತ್, ಉಪಪ್ರಾಂಶುಪಾಲೆ ಅನಿತಾ ಥೋಮಸ್ ಉಪಸ್ಥಿತರಿದ್ದರು. ಶಾಲೆಯ ವತಿಯಿಂದ ಮುಖ್ಯ ಅತಿಥಿಗಳನ್ನು ಗಣ್ಯರು ಸಮ್ಮಾನಿಸಿದರು. ಮುಖ್ಯ ಅತಿಥಿಗಳ ಕಿರು ಪರಿಚಯವನ್ನು ಶೈಕ್ಷಣಿಕ ಸಂಯೋಜಕ ವಂ| ಅರುಲ್ ಜೋಸೆಫ್ ನೆರವೇರಿಸಿದರು. ಶಾಲಾ ಸಂಚಿಕೆಯಾದ ವಾಯ್ಸ್ ಆಫ್ ಎಲ್.ಸಿ.ಎಸ್. ಅನ್ನು ಬಿಡುಗಡೆ ಗೊಳಿಸಲಾಯಿತು. ವಿದ್ಯಾರ್ಥಿಗಳು ಪ್ರಾರ್ಥನೆ, ಕಿರು ಪ್ರಹಸನ, ಕ್ರಿಸ್ಮಸ್ ಸಂದೇಶ ಸಾರುವ ವಿವಿಧ ಕಾರ್ಯಕ್ರಮಗಳನ್ನು ಅಭಿನಯಿಸಿದರು. ವಿದ್ಯಾರ್ಥಿಗಳಾದ ಮೋಹಿತ್ ಕೆ., ಸಿಯೋನಾ ಮೆಂಡೋನ್ಸಾ, ಮಿಹಿರಾ, ಸಾನ್ ಜಾನ್ ಎನ್., ಅಲಿನ್ ಫೆರ್ನಾಂಡಿಸ್, ಸಾನ್ವಿ ಶೆಟ್ಟಿ, ಅಥರ್ವ್ ಅಗರ್‌ವಾಲ್, ಲಾರೆನ್ಸ್ ಅಂದ್ರಾದೆ ಮತ್ತು ರಯಾನ್ ಪ್ರಕಾಶ್ ಡಿ'ಸೋಜಾ ನಿರ್ವಹಿಸಿದರು. ಅನನ್ಯ ಗಾನು, ಡಿ.ಆರ್. ಮುಹಿಲ್, ಗಮನ್ ಕೋಟ್ಯಾನ್ ಮತ್ತು ಅವ್ನಿ ವಂದಿಸಿದರು. ಶಿಕ್ಷಕಿ ಟ್ರಿಜಾ ಮೊಂತೇರೊ ಕಾರ್ಯ ಕ್ರಮ ಸಂಯೋಜಿಸಿದರು. ರೋಶನ್ ಕೊರ್ಡೆರಿಯೊ, ರೋಶನ್ ಸಿಕ್ವೇರಾ ಸಹಕರಿಸಿದ್ದರು.

*Upayuktha 27-12-2025*

# ಅಲೋಶಿಯಸ್ ವಿವಿಯಲ್ಲಿ 146 ನೇ ವಾರ್ಷಿಕ ಅಥ್ಲೆಟಿಕ್ ಮೀಟ್



**ಮಂಗಳೂರು:** ಮಂಗಳೂರಿನ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ 146 ನೇ ವಾರ್ಷಿಕ ಅಥ್ಲೆಟಿಕ್ ಮೀಟ್ ಅನ್ನು ಡಿಸೆಂಬರ್ 22, 2025 ರಂದು ಮಂಗಳಾ ಕ್ರೀಡಾಂಗಣದಲ್ಲಿ ನಡೆಸಲಾಯಿತು. ಭಾರತದ ಅಕ್ವಾವುಮನ್ ಶ್ರೀಮತಿ ಸುಚೇತಾ ದೇಬ್ ಬರ್ಮನ್ ರವರು ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ರೆವರೆಂಡ್ ಫಾದರ್ ಮೆಲ್ವಿನ್ ಜೆ. ಪಿಂಟೊ ಎಸ್‌ಜೆ ಮತ್ತು ಸಂತ ಅಲೋಶಿಯಸ್ ವಿವಿಯ ಕುಲಪತಿ ರೆವರೆಂಡ್ ಡಾ. ಪ್ರವೀಣ್ ಮಾರ್ಟಿಸ್ ಎಸ್‌ಜೆ ವಹಿಸಿದ್ದರು.

ಉದ್ಘಾಟನಾ ಸಮಾರಂಭದ ಭಾಗವಾಗಿ, ಭಾಗವಹಿಸುವ ತಂಡಗಳು ಪ್ರದರ್ಶಿಸಿದ ಶಿಸ್ತು, ಸಮನ್ವಯ ಮತ್ತು ತಂಡದ ಕೆಲಸವನ್ನು ಗುರುತಿಸಿ, ಮೆರವಣಿಗೆಗೆ ಬಹುಮಾನಗಳನ್ನು ನೀಡಲಾಯಿತು. ಔಪಚಾರಿಕ ಉದ್ಘಾಟನೆಯ ನಂತರ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಆಯೋಜಿಸಲಾದ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ನಡೆದವು. ಅಲೋಶಿಯಸ್ ವಿವಿಯ ಆಡಳಿತ ವಿಭಾಗದ ನಿರ್ದೇಶಕ ಡಾ. ಚಾರ್ಲ್ಸ್ ವಿ. ಫರ್ಟಾಡೊರವರು ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಶ್ರೀಮತಿ ಸುಚೇತಾ ದೇಬ್ ಬರ್ಮನ್ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಿದರು.

ಕುಲಪತಿ ರೆ. ಡಾ. ಪ್ರವೀಣ್ ಮಾರ್ಟಿಸ್ ಎಸ್‌ಜೆ ಅವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ, ಸಂಸ್ಥೆಗೆ ಅವರ ಸಮರ್ಪಿತ ಮತ್ತು ಅರ್ಹ ಸೇವೆಯನ್ನು ಗುರುತಿಸಿ ನಿವೃತ್ತ ಸಿಬ್ಬಂದಿ ಸದಸ್ಯರನ್ನು ಸನ್ಮಾನಿಸಲಾಯಿತು. ವಿವಿಧ ಅಥ್ಲೆಟಿಕ್ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು, ಜೊತೆಗೆ ಫ್ಲ್ಯಾಶ್ ಮಾಬ್ ಸ್ಪರ್ಧೆಗಾಗಿ ಪ್ರಶಸ್ತಿಗಳನ್ನು ನೀಡಲಾಯಿತು. ಕಾಲೇಜು ಧ್ವಜವನ್ನು ಇಳಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

*Udayavani 28-12-2025*

# ಅಲೋಶಿಯಸ್ ವಿವಿ: ವಾರ್ಷಿಕ ಅ್ಯತ್ಲೆಟಿಕ್ ಮೀಟ್




**ಬಾವುಟಗುಡ್ಡೆ ಡಿ. 27:** ಸಂತ ಅಲೋಶಿಯಸ್ ವಿಶ್ವವಿದ್ಯಾನಿಲಯದ 146ನೇ ವಾರ್ಷಿಕ ಅ್ಯತ್ಲೆಟಿಕ್ ಮೀಟ್ ಮಂಗಳಾ ಕ್ರೀಡಾಂಗಣದಲ್ಲಿ ನಡೆಯಿತು. ಭಾರತದ ಅಕ್ವಾವುಮನ್ ಸುಚೇತಾ ದೇಬ್ ಬರ್ಮನ್ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ವಂ। ಮೆಲ್ವಿನ್ ಜೆ. ಪಿಂಟೊ ಎಸ್.ಜೆ. ಮತ್ತು ಸಂತ ಅಲೋಶಿಯಸ್ ವಿವಿಯ ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಎಸ್.ಜೆ. ಉಪಸ್ಥಿತರಿದ್ದರು.

ಔಪಚಾರಿಕ ಉದ್ಘಾಟನೆಯ ಅನಂತರ ವಿದ್ಯಾರ್ಥಿಗಳು ಮತ್ತು ಸಿಬಂದಿಗೆ ಆಯೋಜಿಸಲಾದ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ನಡೆದವು.

ಅಲೋಶಿಯಸ್ ವಿವಿಯ ಆಡಳಿತ ವಿಭಾಗದ ನಿರ್ದೇಶಕ ಡಾ। ಚಾರ್ಲ್ಸ್ ವಿ. ಫರ್ಟಾಡೊ ಅವರು ಸಮಾರೋಪದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದರು. ಸುಚೇತಾ ದೇಬ್ ಬರ್ಮನ್ ಭಾಗವಹಿಸಿದರು.

ಕುಲಪತಿ ವಂ। ಡಾ। ಪ್ರವೀಣ್ ಮಾರ್ಟಿಸ್ ಎಸ್.ಜೆ. ಅಧ್ಯಕ್ಷತೆ ವಹಿಸಿದ್ದರು.

ನಿವೃತ್ತ ಸಿಬಂದಿ ಸದಸ್ಯರನ್ನು ಸಮ್ಮಾನಿಸಲಾಯಿತು. ವಿವಿಧ ಅ್ಯತ್ಲೆಟಿಕ್ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ಹಾಗೂ ಫ್ಲ್ಯಾಶ್ ಮಾಬ್ ಸ್ಪರ್ಧೆಗಾಗಿ ಪ್ರಶಸ್ತಿಗಳನ್ನು ನೀಡಲಾಯಿತು.

*Varthabharathi 29-12-2025*

# ಅಲೋಶಿಯಸ್ ವಿವಿಯಲ್ಲಿ 146ನೇ ವಾರ್ಷಿಕ ಅತ್ಲೆಟಿಕ್ ಮೀಟ್




ಮಂಗಳೂರು, ಡಿ.28: ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾನಿಲಯದ 146 ನೇ ವಾರ್ಷಿಕ ಅಥ್ಲೆಟಿಕ್ ಮೀಟ್ ಇತ್ತೀಚೆಗೆ ಮಂಗಳಾ ಕ್ರೀಡಾಂಗಣದಲ್ಲಿ ನಡೆಸಲಾಯಿತು.

ಭಾರತದ ಅಕ್ವಾವುಮನ್ ಸುಚೇತಾ ದೇಬ್ ಬರ್ಮನ್ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ರೆ.ಫಾ. ಮೆಲ್ವಿನ್ ಜೆ. ಪಿಂಟೊ ಎಸ್‌ಜೆ ಮತ್ತು ಸಂತ ಅಲೋಶಿಯಸ್ ವಿವಿಯ ಕುಲಪತಿ ರೆ.ಫಾ.ಡಾ. ಪ್ರವೀಣ್ ಮಾರ್ಟಿಸ್ ಎಸ್‌ಜೆ ವಹಿಸಿದ್ದರು.

ಔಪಚಾರಿಕ ಉದ್ಘಾಟನೆಯ ನಂತರ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಆಯೋಜಿಸಲಾದ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಗಳು ನಡೆದವು.

ಅಲೋಶಿಯಸ್ ವಿವಿಯ ಆಡಳಿತ ವಿಭಾಗದ ನಿರ್ದೇಶಕ ಡಾ.ಚಾರ್ಲ್ಸ್ ವಿ. ಫುರ್ಟಾಡೊ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಈ ಸಂದರ್ಭ ಸಂಸ್ಥೆಯ ನಿವೃತ್ತ ಸಿಬ್ಬಂದಿ ಸದಸ್ಯರನ್ನು ಸನ್ಮಾನಿಸಲಾಯಿತು. ವಿವಿಧ ಅತ್ಲೆಟಿಕ್ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಫ್ಲ್ಯಾಶ್ ಮಾಬ್ ಸ್ಪರ್ಧೆಗಾಗಿ ಪ್ರಶಸ್ತಿಗಳನ್ನು ನೀಡಲಾಯಿತು. ಕಾಲೇಜು ಧ್ವಜವನ್ನು ಇಳಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

Vijayavani 27-12-2025

# ಅಲೋಶಿಯಸ್‌ನಲ್ಲಿ ವಾರ್ಷಿಕ ಕ್ರೀಡಾಕೂಟ



**ವಾರ್ಷಿಕ ಕ್ರೀಡಾಕೂಟ ಅಕ್ವಾ ವುಮನ್ ಸುಚೇತಾ ದೇಬ್ ಬರ್ಮನ್ ಉದ್ಘಾಟಿಸಿದರು. ಮೆಲ್ವಿನ್ ಜೆ.ಪಿಂಟೊ, ಡಾ.ಚಾರ್ಲ್ಸ್ ವಿ.ಫರ್ಟಾಡೊ ಇದ್ದರು.**

**ಮಂಗಳೂರು:** ನಗರದ ಸಂತ ಅಲೋಶಿಯಸ್ ಪರಿಗಣಿತ ವಿಶ್ವವಿದ್ಯಾಲಯದ 146ನೇ ವಾರ್ಷಿಕ ಕ್ರೀಡಾಕೂಟ ಮಂಗಳಾ ಕ್ರೀಡಾಂಗಣದಲ್ಲಿ ನಡೆಯಿತು.

ಭಾರತದ ಅಕ್ವಾ ವುಮನ್ ಸುಚೇತಾ ದೇಬ್ ಬರ್ಮನ್ ಕ್ರೀಡಾಕೂಟ ಉದ್ಘಾಟಿಸಿದರು. ಸಂತ ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ಫಾ.ಮೆಲ್ವಿನ್ ಜೆ.ಪಿಂಟೊ ಅಧ್ಯಕ್ಷತೆ ವಹಿಸಿದ್ದರು. ಅಲೋಶಿಯಸ್ ವಿವಿಯ ಆಡಳಿತ ವಿಭಾಗದ ನಿರ್ದೇಶಕ ಡಾ.ಚಾರ್ಲ್ಸ್ ವಿ.ಫರ್ಟಾಡೊ ಸಮಾರೋಪ ಸಮಾರಂಭದ ಮುಖ್ಯ ಅತಿಥಿಯಾಗಿದ್ದರು. ಸಂತ ಅಲೋಶಿಯಸ್ ವಿವಿ ಕುಲಪತಿ ಡಾ.ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆ ನಿವೃತ್ತ ಸಿಬ್ಬಂದಿ ಸದಸ್ಯರನ್ನು ಸನ್ಮಾನಿಸಲಾಯಿತು. ವಿವಿಧ ಕ್ರೀಡಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

Times of India 29-12-2025

# Smartphone-based device to detect neonatal jaundice

Deepthi.Sanjiv
@timesofindia.com

**Manipal:** In a step towards improving newborn care, researchers in Mangaluru developed a low-cost, smartphone-based device named 'mBilimeter' to estimate bilirubin levels in neonates non-invasively, offering a stress-free alternative to conventional blood tests.

The device was developed by Dr Ruban S of St Aloysius (Deemed to be University), Mangaluru, in collaboration with Dr Sanjeev Rai and Dr Saritha Paul of Father Muller Medical College, Mangaluru, under the aegis of the Medical Instruments, Devices and Allied Services (MIDAS) initiative of DST-MAHE Deemed University, Manipal. The research team said that neonatal jaundice, marked by yellowish discolouration of the skin and eyes due to elevated bilirubin levels, affects over 60% of newborns. If left untreated, severe jaundice can lead to acute bilirubin encephalopathy and kernicterus, conditions that may cause permanent brain damage, hearing loss, and abnormal movements. Early detection and timely treatment are crucial to prevent long-term complications.

Currently, total serum bilirubin (TSB) estimation through blood tests remains the standard diagnostic method. However, it involves painful blood sampling, making the procedure stressful for newborns and caregivers. While transcutaneous bilirubin (TcB) devices provide a non-invasive option, they are often unavailable or unaffordable in resource-limited healthcare settings.

Addressing this gap, the mBilimeter uses AI and advanced imaging technology to estimate bilirubin levels by analysing images of a newborn's skin, such as the chest or forehead, without physical contact or blood sampling. The device integrates a microprocessor with a pre-trained machine-learning model capable of analysing skin tones and image characteristics to provide real-time bilirubin estimates.

Compact, portable, and user-friendly, the device requires minimal training to operate. It also features IoT capabilities, enabling continuous data flow to database management systems and facilitating remote monitoring in healthcare settings. The device is aimed at affordability, with an estimated cost of Rs 10,000 to Rs 12,000, making it suitable for hospitals and clinics with limited resources. Lt Gen Dr MD Venkatesh, VC, MAHE & chairman of the HUB and Dr G Arun Maiya, dean, MCHP & principal coordinator and Dr T Lazar Mathew, of MIDAS HUB, said that within a year, the medical device research was initiated at MAHE DST HUB and is now under an aggressive clinical validation process.

Upayukatha 30-12-2025

# ಅಲೋಶಿಯಸ್ ವಿವಿಯ ಪ್ರೊ. ಎಡ್ಮಂಡ್ ಫ್ರಾಂಕ್, ಪೋಪ್ ಲಿಯೋ XIVರವರ ಭೇಟಿ




**ಮಂಗಳೂರು:** ಅಲೋಶಿಯಸ್ ವಿವಿಯ ಪ್ರೊ. ಎಡ್ಮಂಡ್ ಫ್ರಾಂಕ್ ರವರು ಡಿಸೆಂಬರ್ 14, 2025 ರಂದು ರೋಮ್‌ನ ವ್ಯಾಟಿಕನ್‌ನಲ್ಲಿರುವ ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ, ಕೈದಿಗಳಿಗಾಗಿ ಆಯೋಜಿಸಿದ ಜುಬಿಲಿ ಮಾಸ್ ಆಫ್ ಹೋಪ್ ಸಂದರ್ಭದಲ್ಲಿ ಪೋಪ್ ಲಿಯೋ XIV ಅವರನ್ನು ಭೇಟಿಯಾದರು.

ಪಿಎಂಐನ ರಾಷ್ಟ್ರೀಯ ಸಂಯೋಜಕ ಮತ್ತು ಸಹ-ಸಂಸ್ಥಾಪಕ ರೆ. ಡಾ. ಫ್ರಾನ್ಸಿಸ್ ಕೋಡಿಯನ್, ಎಂಸಿಬಿಎಸ್ ನೇತೃತ್ವದಲ್ಲಿ ಆಯೋಜಿಸಲಾದ ಈ ಸಭೆಯಲ್ಲಿ ಪಿಎಂಐನ ಸಹ-ಸಂಸ್ಥಾಪಕ ರೆ. ಫಾದರ್ ವರ್ಗೀಸ್ ಕರಿಪೇರಿ, ಪಿಎಂಐನ ರಾಷ್ಟ್ರೀಯ ಕಾರ್ಯದರ್ಶಿ ಸೀನಿಯರ್ ಅಮಲಾ ಡಿಸಿ ಹಾಗೂ ಕೈದಿಗಳು ಮತ್ತು ಪಿಎಂಐ ಸ್ವಯಂಸೇವಕರಿಗೆ ಡಿಪ್ಲೊಮಾ ಕಾರ್ಯಕ್ರಮಗಳ ಸಂಯೋಜಕರಾದ ಮಂಗಳೂರಿನ ಅಲೋಶಿಯಸ್ ವಿವಿಯ ಪ್ರೊ. ಎಡ್ಮಂಡ್ ಫ್ರಾಂಕ್ ರವರು ಹಾಜರಿದ್ದರು. ಈ ಸಂದರ್ಭದಲ್ಲಿ ಸ್ಯಾಕ್ರೊಫಾನೊದಲ್ಲಿರುವ ಫ್ರಾಟರ್ನಾ ಡೋಮಸ್‌ನಲ್ಲಿ ಇಟಾಲಿಯನ್ ಜೈಲು ಚಾಪ್ಲಿನ್‌ಗಳ ಜನರಲ್ ಇನ್ಸ್‌ಪೆಕ್ಟರೇಟ್ ಎರಡು ದಿನಗಳ ಅಧ್ಯಯನ, ಪ್ರಾರ್ಥನೆ, ಚರ್ಚೆಗಳು ಮತ್ತು ಸಾಕ್ಷ್ಯಗಳನ್ನು ಆಯೋಜಿಸಲಾಗಿತ್ತು.

ಪೋಪ್ ಲಿಯೋ XIV ಅವರು ಕೈದಿಗಳ ಮಹೋತ್ಸವದ ಬಲಿಪೂಜೆಯ ನೇತೃತ್ವ ವಹಿಸಿದ್ದರು, ಇದು ಪವಿತ್ರ ವರ್ಷ 2025 ರ ಪ್ರಮುಖ ಕಾರ್ಯಕ್ರಮವಾಗಿದ್ದು,, ಇದು ಕೈದಿಗಳು, ಅವರ ಕುಟುಂಬಗಳು ಮತ್ತು ಅವರ ಪುನರ್ವಸತಿ ಮತ್ತು ರೂಪಾಂತರಕ್ಕೆ ಬದ್ಧರಾಗಿರುವ ಎಲ್ಲರಿಗೂ ಮೀಸಲಾಗಿರುವ ಆಚರಣೆಯಾಗಿದೆ.

ಜುಬಿಲಿ ಬಲಿಪೂಜೆಯಲ್ಲಿ ಇಟಲಿ, ಸ್ಪೇನ್, ಪೋರ್ಚುಗಲ್ ಮತ್ತು ಇತರ ದೇಶಗಳ ಅನೇಕ ಜೈಲುಗಳಿಂದ ಮಾಜಿ ಮತ್ತು ಪ್ರಸ್ತುತ ಕೈದಿಗಳು ಮತ್ತು ಬಾಲಾಪರಾಧಿಗಳು ಸೇರಿದಂತೆ ಸುಮಾರು 90 ದೇಶಗಳಿಂದ ನೋಂದಾಯಿಸಿಕೊಂಡ 6,000ಕ್ಕೂ ಹೆಚ್ಚು ಯಾತ್ರಿಕರು ಭಾಗವಹಿಸಿದ್ದರು.

ಕೈದಿಗಳು ಮತ್ತು ದಂಡ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುವವರನ್ನು ಉದ್ದೇಶಿಸಿ ಪೋಪ್ ಲಿಯೋ ಮಾತನಾಡಿ, ಸಮನ್ವಯ, ಕರುಣೆ ಮತ್ತು ಪುನರ್ವಸತಿಗೆ ಆದ್ಯತೆ ನೀಡುವ ನ್ಯಾಯ ವ್ಯವಸ್ಥೆಗೆ ಕರೆ ನೀಡಿದರು, ನ್ಯಾಯವು ಶಿಕ್ಷೆಯಲ್ಲ, ಗುಣಪಡಿಸುವ ಪ್ರಕ್ರಿಯೆಯಾಗಿರಬೇಕು ಎಂದು ಒತ್ತಿ ಹೇಳಿದರು. "ಭರವಸೆಯು ಜೀವನಕ್ಕೆ ಅಗತ್ಯವಾದ ದೈವಿಕ ಶಕ್ತಿಯಾಗಿದೆ" ಮತ್ತು ಪ್ರತಿಯೊಬ್ಬರೂ, ಅವರ ಪರಿಸ್ಥಿತಿಗಳನ್ನು ಲೆಕ್ಕಿಸದೆ, ವಿಮೋಚನೆಯ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದು ತಮ್ಮ ಧರ್ಮೋಪದೇಶದಲ್ಲಿ ಭರವಸೆಯ ಸಂದೇಶವನ್ನು ನೀಡಿದರು.

ಅಲೋಶಿಯಸ್ ಸಂಸ್ಥೆಗಳ ರೆಕ್ಟರ್ ರೆ. ಫಾ. ಮೆಲ್ವಿನ್ ಪಿಂಟೊ, ಎಸ್‌ಜೆ, ವಿವಿಯ ಕುಲಪತಿಗಳಾದ ರೆ. ಡಾ ಪ್ರವೀಣ್ ಮಾರ್ಟಿಸ್, ಎಸ್‌ಜೆ, ಅಧ್ಯಾಪಕರು ಮತ್ತು ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘದವರು ಪ್ರೊ. ಎಡ್ಮಂಡ್ ಫ್ರಾಂಕ್ ಅವರನ್ನು ಅಭಿನಂದಿಸಿದರು.

*Varthabharathi 30-12-2025*

# ಜ.3ರಂದು 'ಬ್ಯುಸಿನೆಸ್ ಟಾನಿಕ್'ನ 350ನೇ ಸಂಚಿಕೆ ಕಾರ್ಯಕ್ರಮ

ಮಂಗಳೂರು, ಡಿ. 29: 'ನಮ್ಮ ಕುಡ್ಲ' ವಾಹಿನಿಯಲ್ಲಿ ಕಳೆದ ಏಳು ವರ್ಷಗಳಿಂದ ಪ್ರಸಾರವಾಗುವ ಸಾಪ್ತಾಹಿಕ ರವಿವಾರದ 'ಬ್ಯುಸಿನೆಸ್ ಟಾನಿಕ್' ಎಂಬ ಕಾರ್ಯಕ್ರಮದ 350ನೇ ಸಂಚಿಕೆ ಜ.3ರಂದು ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ಕಾರ್ಯಕ್ರಮದ ರೂವಾರಿ, ಲೆಕ್ಕಪರಿಶೋಧಕ ಸಿಎ ಎಸ್.ಎಸ್.ನಾಯಕ್ ಸುದ್ದಿಗೋಷ್ಠಿಯಲ್ಲಿಂದು ತಿಳಿಸಿದ್ದಾರೆ.

ಬೆಳಗ್ಗೆ 9.15ಕ್ಕೆ ಉದ್ಘಾಟನೆಗೊಳ್ಳಲಿದೆ. ಇಲ್ಲಿಯವರೆಗಿನ ಸಂಚಿಕೆಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಗಣ್ಯರನ್ನು ಇದೇ ವೇಳೆ ಸನ್ಮಾನಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ನಮ್ಮ ಕುಡ್ಲ ನಿರ್ದೇಶಕರಾದ ಹರೀಶ್ ಬಿ.ಕರ್ಕೇರ, ಲೀಲಾಕ್ಷ ಬಿ.ಕರ್ಕೇರ, ಬ್ಯುಸಿನೆಸ್ ಟಾನಿಕ್ ನಿರ್ದೇಶಕ ಸಂತ ಅಲೋಶಿಯಸ್ ವಿವಿ ಸಹಾಯಕ ಪ್ರಾಧ್ಯಾಪಕ ಅರ್ಜುನ್ ಪ್ರಕಾಶ್, ಕಾರ್ಯಕ್ರಮ ಸಂಯೋಜಕ ರಮೇಶ್ಚಂದ್ರ ಪ್ರಭು ಉಪಸ್ಥಿತರಿದ್ದರು.

*Samyuktha Karnataka 30-12-2025*

# ಬ್ಯುಸಿನೆಸ್ ಟಾನಿಕ್ 350

ಮಂಗಳೂರು: ಹೂಡಿಕೆ, ವಿಮೆ, ಗ್ರಾಹಕರ ರಕ್ಷಣೆ, ರೇರಾ, ಐಪಿಆರ್, ಆತ್ಮನಿರ್ಭರ್ ಭಾರತ್, ಎಂಎಸ್ ಎಂಇ, ಸ್ಟಾರ್ಟ್ ಅಪ್, ಹೊಸ ಕೈಗಾರಿಕಾ ನೀತಿ ಸಹಿತ ವಿವಿಧ ವಿಷಯಗಳ ಬಗ್ಗೆ ನಮ್ಮ ಕುಡ್ಲ ವಾಹಿನಿಯಲ್ಲಿ ಕಳೆದ 7 ವರ್ಷಗಳಿಂದ ಪ್ರಸಾರವಾಗುವ ಸಾಪ್ತಾಹಿಕ ಭಾನುವಾರದ 'ಬ್ಯುಸಿನೆಸ್ ಟಾನಿಕ್' ಎಂಬ ಕಾರ್ಯಕ್ರಮದ 350ನೇ ಸಂಚಿಕೆ ಜ.3ರಂದು ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಲೆಕ್ಕಪರಿಶೋಧಕ ಎಸ್.ಎಸ್.ನಾಯಕ್ ಅವರು ಪ್ರತಿ ಭಾನುವಾರ ಬೆಳಗ್ಗೆ 10ರಿಂದ 11.30ರವರೆಗೆ ಈ ಕಾರ್ಯಕ್ರಮ ನಡೆಯುತ್ತದೆ. 'ಬ್ಯುಸಿನೆಸ್ ಟಾನಿಕ್'ನ 350ನೇ ಸಂಚಿಕೆ ಜ.3ರಂದು ಬೆಳಗ್ಗೆ 9.15ಕ್ಕೆ ಉದ್ಘಾಟನೆಗೊಳ್ಳಲಿದೆ. ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಹರೀಶ್ ಬಿ.ಕರ್ಕೇರ, ಲೀಲಾಕ್ಷ ಬಿ.ಕರ್ಕೇರ, ಅರ್ಜುನ್ ಪ್ರಕಾಶ್, ರಮೇಶ್‌ಚಂದ್ರ ಪ್ರಭು ಉಪಸ್ಥಿತರಿದ್ದರು.

*Kannadaprabha 30-12-2025*

# ಜ.3 ರಂದು 'ಬ್ಯುಸಿನೆಸ್ ಟಾನಿಕ್' 350ನೇ ಸಂಚಿಕೆ ಅನಾವರಣ

• ಕನ್ನಡಪ್ರಭ ವಾರ್ತೆ
ಮಂಗಳೂರು

ಹೂಡಿಕೆ, ವಿಮೆ, ಗ್ರಾಹಕರ ರಕ್ಷಣೆ, ರೇರಾ, ಐಪಿಆರ್, ಆತ್ಮನಿರ್ಭರ್ ಭಾರತ್, ಎಂಎಸ್ ಎಂಇ, ಸ್ಟಾರ್ಟ್ ಅಪ್, ಹೊಸ ಕೈಗಾರಿಕಾ ನೀತಿ ಸಹಿತ ವಿವಿಧ ವಿಷಯಗಳ ಬಗ್ಗೆ ನಮ್ಮ ಕುಡ್ಲ ವಾಹಿನಿಯಲ್ಲಿ ಕಳೆದ 7 ವರ್ಷಗಳಿಂದ ಪ್ರಸಾರವಾಗುವ ಸಾಪ್ತಾಹಿಕ ಭಾನುವಾರದ 'ಬ್ಯುಸಿನೆಸ್ ಟಾನಿಕ್' ಎಂಬ ಕಾರ್ಯಕ್ರಮದ 350ನೇ ಸಂಚಿಕೆ ಜ.3ರಂದು ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ರೂವಾರಿ, ಖ್ಯಾತ ಲೆಕ್ಕಪರಿಶೋಧಕ ಸಿಎ ಎಸ್.ಎಸ್.ನಾಯಕ್ ಮಾತನಾಡಿ, 'ಬ್ಯುಸಿನೆಸ್ ಟಾನಿಕ್'ನ 350ನೇ ಸಂಚಿಕೆ ಬೆಳಗ್ಗೆ 9.15ಕ್ಕೆ ಉದ್ಘಾಟನೆಗೊಳ್ಳಲಿದೆ. ಕರ್ಣಾಟಕ ಬ್ಯಾಂಕ್ ಎಂಡಿ ರಾಘವೇಂದ್ರ ಶ್ರೀನಿವಾಸ ಭಟ್ ಉದ್ಘಾಟಿಸಲಿದ್ದಾರೆ. ಎಂಆರ್‌ಪಿಎಲ್ ಗ್ರೂಪ್ ಜನರಲ್ ಮ್ಯಾನೇಜರ್ ಕೃಷ್ಣ ಹೆಗ್ಡೆ ಮಿಯಾರ್ ದೀಪ ಪ್ರಜ್ವಲನ ಮಾಡುವರು. ಅಲೋಶಿಯಸ್ ವಿವಿ ಉಪ ಕುಲಪತಿ ರೆ.ಫಾ. ಡಾ.ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಭಾರತ್ ಕೋ ಆಪರೇಟಿವ್ ಬ್ಯಾಂಕ್ ಮುಂಬೈ ಇದರ ಅಧ್ಯಕ್ಷ ಸೂರ್ಯಕಾಂತ್ ಜೆ.ಸುವರ್ಣ, ಮಂಗಳೂರು ಕೆಸಿಸಿಐ ಅಧ್ಯಕ್ಷ ಪಿ.ಬಿ.ಅಹ್ಮದ್ ಮುದಸ್ಸರ್, ಮಂಗಳೂರು ಇಸ್ಕಾನ್ ಅಧ್ಯಕ್ಷ ಗುಣಾಕರ ರಾಮದಾಸ, ಬೆಂಗಳೂರು ಫಿಜಾ ಗ್ರೂಪ್ ಅಧ್ಯಕ್ಷ ಬಿ.ಎಂ.ಫಾರೂಕ್ ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಎಲ್ಲ ಸಂಚಿಕೆಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಗಣ್ಯರನ್ನು ಸನ್ಮಾನಿಸಲಾಗುವುದು ಎಂದರು.

ಉದ್ಘಾಟನೆ ಬಳಿಕ 350ನೇ ಸಂಚಿಕೆಯ ಪ್ಯಾನಲ್ ಚರ್ಚೆ ನಡೆಯಲಿದೆ. 'ಇಂಡಿಯಾನೊಮಿಕ್ -2026' ವಿಚಾರದಲ್ಲಿ ಚೆನ್ನೈನ ಸೆನ್ ಅಂಡ್ ಸಿಂಪ್ಲಿಸಿಟಿ ಸಿಇಒ ಸುನೀಲ್ ಸುಬ್ರಮಣಿಯಂ, ವಚನ ಇನ್‌ವೆಸ್ಟ್‌ಮೆಂಟ್ ಪ್ರೈ.ಲಿ. ಸಿಎ ರುದ್ರಮೂರ್ತಿ, ಎನ್‌ಎಂಪಿಎ ಮಾಜಿ ಅಧ್ಯಕ್ಷ ಡಾ. ವೆಂಕಟರಮಣ ಅಕ್ಕರಾಜು, ಮಾಡರೇಟರ್ ಆಗಿ ಎನ್‌ಆರ್‌ಐ ಮನಿ ಕ್ಲಿನಿಕ್ ಸಂಸ್ಥಾಪಕ ಡಾ.ಚಂದ್ರಕಾಂತ್ ಭಟ್ ಭಾಗವಹಿಸಲಿದ್ದಾರೆ ಎಂದರು.

ನಮ್ಮ ಕುಡ್ಲ ಚಾನೆಲ್‌ನ ನಿರ್ದೇಶಕರಾದ ಹರೀಶ್ ಬಿ.ಕರ್ಕೇರ, ಲೀಲಾಕ್ಷ ಬಿ.ಕರ್ಕೇರ, ಬ್ಯುಸಿನೆಸ್ ಟಾನಿಕ್‌ನ ನಿರ್ದೇಶಕ ಸಂತ ಅಲೋಶಿಯಸ್ ವಿವಿ ಸಹಾಯಕ ಪ್ರಾಧ್ಯಾಪಕ ಅರ್ಜುನ್ ಪ್ರಕಾಶ್, ಕಾರ್ಯಕ್ರಮ ಸಂಯೋಜಕ ರಮೇಶ್ಚಂದ್ರ ಪ್ರಭು ಇದ್ದರು.



ಸುದ್ದಿಗೋಷ್ಠಿಯಲ್ಲಿ ಸಿಎ ಎಸ್.ಎಸ್. ನಾಯಕ್ ಮಾತನಾಡಿದರು.

Vijayavani 30-12-2025

# 3ರಂದು ಇಂಡಿಯಾನೊಮಿಕ್ಸ್-2025

**ಮಂಗಳೂರು:** ಹೂಡಿಕೆ, ವಿಮೆ, ಗ್ರಾಹಕರ ರಕ್ಷಣೆ, ರೇರಾ, ಐಪಿಆರ್, ಆತ್ಮನಿರ್ಭರ್ ಭಾರತ್, ಎಂಎಸ್‌ಎಂಇ, ಸ್ಟಾರ್ಟ್‌ಅಪ್, ಹೊಸ ಕೈಗಾರಿಕಾ ನೀತಿ, ಜಿಎಸ್‌ಟಿ ಸಹಿತ ವಿವಿಧ ವಿಷಯಗಳ ಬಗ್ಗೆ ನಮ್ಮ ಕುಡ್ಲ ವಾಹಿನಿಯಲ್ಲಿ ಕಳೆದ 7 ವರ್ಷಗಳಿಂದ ಪ್ರಸಾರವಾಗುತ್ತಿರುವ ಬಿಜಿನೆಸ್ ಟಾನಿಕ್ ಕಾರ್ಯಕ್ರಮದ 350ನೇ ಸಂಚಿಕೆಯನ್ನು ಜ.3ರಂದು ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ಆಚರಿಸಲಾಗುವುದು.

**■ ಬಿಜಿನೆಸ್ ಟಾನಿಕ್ ಕಾರ್ಯಕ್ರಮದ 350ನೇ ಸಂಚಿಕೆ**

ಬಿಜಿನೆಸ್ ಟಾನಿಕ್ ನೇರ ಫೋನ್‌ಇನ್ ಕಾರ್ಯಕ್ರಮ ಪ್ರತಿ ಭಾನುವಾರ ಬೆಳಗ್ಗೆ 10ರಿಂದ ನಡೆಯುತ್ತದೆ. 350ನೇ ಸಂಚಿಕೆ ಆಚರಣೆ ಅಂಗವಾಗಿ ಜ.3ರಂದು ಬೆಳಗ್ಗೆ 9.15ಕ್ಕೆ ಇಂಡಿಯಾನೊಮಿಕ್ಸ್-25 ಪ್ಯಾನೆಲ್ ಚರ್ಚೆ ಆಯೋಜಿಸಲಾಗಿದೆ. ತಜ್ಞರ ಒಳನೋಟ, ಭಾರತದ ಪ್ರಮುಖ ಆರ್ಥಿಕ ಕ್ಷೇತ್ರಗಳಲ್ಲಿ ಬೆಳವಣಿಗೆ ಮತ್ತು ಸಹಯೋಗವನ್ನು ಉತ್ತೇಜಿಸಲು ಈ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ ಎಂದು ಕಾರ್ಯಕ್ರಮದ ರೂವಾರಿ ಸಿಎ ಎಸ್.ಎಸ್. ನಾಯಕ್ ಹೇಳಿದರು.

ಕರ್ಣಾಟಕ ಬ್ಯಾಂಕ್‌ನ ಎಂಡಿ ಹಾಗೂ ಸಿಇಒ ರಾಘವೇಂದ್ರ ಶ್ರೀನಿವಾಸ ಭಟ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಎಂಆರ್‌ಪಿಎಲ್‌ನ ಗ್ರೂಪ್ ಜನರಲ್ ಮ್ಯಾನೇಜರ್ ಕೃಷ್ಣ ಹೆಗ್ಡೆ ಮಿಯಾರ್ ದೀಪ ಪ್ರಜ್ವಲನೆಗೊಳಿಸಲಿದ್ದಾರೆ. ಅಲೋಶಿಯಸ್ ಪರಿಗಣಿತ ವಿವಿಯ ಉಪಕುಲಪತಿ ಫಾ.ಡಾ.ಪ್ರವೀಣ್ ಮಾರ್ಟಿಸ್ ಅಧ್ಯಕ್ಷತೆ ವಹಿಸಲಿದ್ದಾರೆ. ತಜ್ಞರು ಪ್ಯಾನಲಿಸ್ಟ್‌ಗಳಾಗಿ ಭಾಗವಹಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳನ್ನು ಮತ್ತು ಗಣ್ಯರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಗುವುದೆಂದು ತಿಳಿಸಿದರು.

ನಮ್ಮ ಕುಡ್ಲ ನಿರ್ದೇಶಕರಾದ ಹರೀಶ್ ಬಿ.ಕರ್ಕೇರ, ಲೀಲಾಕ್ಷ ಬಿ.ಕರ್ಕೇರ, ಸಂತ ಅಲೋಶಿಯಸ್ ವಿವಿಯ ರಿಜಿಸ್ಟ್ರಾರ್ ಡಾ.ರೊನಾಲ್ಡ್ ನಝುರತ್, ಸಹಾಯಕ ಪ್ರಾಧ್ಯಾಪಕ ಅರ್ಜುನ್ ಪ್ರಕಾಶ್, ಕಾರ್ಯಕ್ರಮ ಸಂಯೋಜಕ ರಮೇಶ್ಚಂದ್ರ ಪ್ರಭು ಮೊದಲಾದವರು ಉಪಸ್ಥಿತರಿದ್ದರು.

*Hosadigantha 30-12-2025*

# ನಮ್ಮ ಕುಡ್ಲ ವಾಹಿನಿಯಲ್ಲಿ 'ಬ್ಯುಸಿನೆಸ್ ಟಾನಿಕ್' ಜ.3ರಂದು 350ನೇ ಸಂಚಿಕೆ

**• ಮಂಗಳೂರು:** ನಮ್ಮ ಕುಡ್ಲ ವಾಹಿನಿಯಲ್ಲಿ 'ಬ್ಯುಸಿನೆಸ್ ಟಾನಿಕ್' ಎಂಬ ಕಾರ್ಯಕ್ರಮದ 350ನೇ ಸಂಚಿಕೆ ಜ.3ರಂದು ಸಂತ ಅಲೋಶಿಯಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ ಎಂದು ಕಾರ್ಯಕ್ರಮದ ರೂವಾರಿ, ಖ್ಯಾತ ಲೆಕ್ಕಪರಿಶೋಧಕ ಸಿಎ ಎಸ್.ಎಸ್ ನಾಯಕ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಹೂಡಿಕೆ, ವಿಮೆ, ಗ್ರಾಹಕರ ರಕ್ಷಣೆ, ರೇರಾ, ಐಪಿಆರ್, ಆತ್ಮನಿರ್ಭರ್ ಭಾರತ್, ಎಂಎಸ್ ಎಂಇ, ಸ್ಟಾರ್ಟ್ ಅಪ್, ಹೊಸ ಕೈಗಾರಿಕಾ ನೀತಿ ಸಹಿತ ವಿವಿಧ ವಿಷಯಗಳ ಬಗ್ಗೆ ನಮ್ಮ ಕುಡ್ಲ ವಾಹಿನಿಯಲ್ಲಿ ಕಳೆದ 7 ವರ್ಷಗಳಿಂದ ಸಾಪ್ತಾಹಿಕವಾಗಿ ಈ ಕಾರ್ಯಕ್ರಮ ಪ್ರಸಾರವಾಗುತ್ತಿದೆ ಎಂದವರು ಹೇಳಿದರು.

**ವಿನೂತನ ಕಾರ್ಯಕ್ರಮ**

ಪ್ರತೀ ಭಾನುವಾರ ಪೂರ್ವಾಹ್ನ 10ರಿಂದ 11.30ರವರೆಗೆ ಈ ಕಾರ್ಯಕ್ರಮ ನಡೆಯುತ್ತದೆ. ನೇರ ಫೋನ್ ಇನ್ ಮುಖಾಂತರ ವೀಕ್ಷಕರು ಉತ್ತರವನ್ನು ಪಡೆಯುತ್ತಾರೆ. ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಉತ್ತರವನ್ನು ನೀಡಿದ್ದಾರೆ. ಸ್ಥಳದಲ್ಲಿ ಸಮಸ್ಯೆ ಬಗೆಹರಿಸುವ ವಿನೂತನ ಕಾರ್ಯಕ್ರಮ ಇದಾಗಿದೆ ಎಂದರು.

'ಬ್ಯುಸಿನೆಸ್ ಟಾನಿಕ್'ನ 350ನೇ ಸಂಚಿಕೆ ಜ.3ರಂದು ಬೆಳಗ್ಗೆ 9.15ಕ್ಕೆ ಉದ್ಘಾಟನೆಗೊಳ್ಳಲಿದೆ. ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಪ್ಯಾನಲಿಸ್ಟ್‌ಗಳಾಗಿ ಯಶಸ್ವಿ ನಾಯಕರು ಪಾಲ್ಗೊಳ್ಳಲಿದ್ದಾರೆ. ಎಲ್ಲಾ ಸಂಚಿಕೆಯ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಗಣ್ಯರನ್ನು ಇದೇ ವೇಳೆ ಸನ್ಮಾನಿಸಲಾಗುವುದು ಎಂದರು.

ನಮ್ಮ ಕುಡ್ಲ ನಿರ್ದೇಶಕರಾದ ಹರೀಶ್ ಬಿ.ಕರ್ಕೇರ, ಲೀಲಾಕ್ಷ ಬಿ.ಕರ್ಕೇರ, 'ಬ್ಯುಸಿನೆಸ್ ಟಾನಿಕ್'ನ ನಿರ್ದೇಶಕ ಸಂತ ಅಲೋಶಿಯಸ್ ವಿವಿ ಸಹಾಯಕ ಪ್ರಾಧ್ಯಾಪಕ ಅರ್ಜುನ್ ಪ್ರಕಾಶ್, ಕಾರ್ಯಕ್ರಮ ಸಂಯೋಜಕ ರಮೇಶ್ಚಂದ್ರ ಪ್ರಭು ಉಪಸ್ಥಿತರಿದ್ದರು.

# Digital News Links

1. **Mangaluru: St Aloysius University holds AL-MUN 3.0**
   **https://www.daijiworld.com/news/newsDisplay?newsID=1300921**

2. **Mangaluru: St Aloysius University holds talk on Digital Safety**
   **https://www.daijiworld.com/news/newsDisplay?newsID=1301107**

3. **St Aloysius University holds Requiem Memorial Mass in loving memory of Fr Swebert D'Silva SJ**
   **https://www.daijiworld.com/news/newsDisplay?newsID=1301515**

4. **St Aloysius (Deemed to be University) || 146th Annual Athletic Meet**
   **https://www.youtube.com/watch?v=8QlDm5HR_6Q&t=29s**

5. **St Aloysius University student wins silver, bronze at All India University Swimming Competition**
   **https://www.daijiworld.com/news/newsDisplay?newsID=1301639**

6. **Mangaluru: St Aloysius University holds 146th Annual Athletic meet**
   **https://www.daijiworld.com/news/newsDisplay?newsID=1301915**

7. **ಅಲೋಶಿಯಸ್ ವಿವಿಯಲ್ಲಿ 146ನೇ ವಾರ್ಷಿಕ ಅಥ್ಲೆಟಿಕ್ ಮೀಟ್**
   **https://epapers.upayuktha.com/news?page=5&date=2025-12-27**

8. **ಡಿಗ್ರಿ ಫೈಲ್ ಆದ ಹುಡುಗ ಕನ್ನಡ ಮಾಧ್ಯಮದಲ್ಲಿ ಕಲಿತು, ಪ್ರತಿಷ್ಠಿತ ವಿಶ್ವವಿದ್ಯಾಲಯದ Vice Chancellor ಆದ ರೋಚಕ ಕಥೆ!**
   **https://www.youtube.com/watch?v=1vVfl1wRd1A**

9. **Mangaluru: Aloysian Games 2026 scheduled on January 9 and 10; Run on January 18**
   **https://www.daijiworld.com/news/newsDisplay?newsID=1302104**

10. **ಅಲೋಶಿಯಸ್ ವಿವಿಯ ಪ್ರೊ. ಎಡ್ಮಂಡ್ ಫ್ರಾಂಕ್ ಪೋಪ್ ಲಿಯೋ XIVರವರ ಭೇಟಿ**
    **https://www.upayuktha.com/2025/12/Edmund%20Frank%20oSt-Aloysius-University-meets-Pope-Leo-XIV-with-the-Indian-Prison-Ministry-Delegation-at-Vatican.html**

11. **Prof Edmund Frank of St Aloysius University meets Pope Leo XIV with Indian Prison Ministry envoy**
    **https://daijiworld.com/news/newsDisplay?newsID=1302200**